ಫೆಬ್ರವರಿ 28

## ಜಯದ ಆಲೋಚನೆ!

ಬೆಳಿಗ್ಗೆ : ಅರಣ್ಯ 17, 18, 19
ಸಂಜೆ : ಮಾರ್ಕ. 6:30–56

"ಜಯಹೊಂದುವವನು ಇವುಗಳಿಗೆ ಬಾಧ್ಯನಾಗುವನು; ನಾನು ಅವನಿಗೆ ದೇವರಾಗಿರುವೆನು. ಅವನು ನನಗೆ ಮಗನಾಗಿರುವನು" (ಪ್ರಕ. 21:7).

ಈ ಪ್ರಪಂಚದಲ್ಲಿ ನೀವು ಜಯಭರಿತ ಜೀವನ ನಡೆಸಬೇಕಾದರೆ, ಯಾವಾಗ್ಯೂ ನಿಮ್ಮಲ್ಲಿ ಗೆಲುವಿನ ಚಿಂತನೆ, ಮನಸ್ಸು ಇರಲಿ. ಲೌಕೀಕ ಜೀವಿತದಲ್ಲಾದರೂ ಸರಿ, ಆತ್ಮೀಕ ಜೀವಿತದಲ್ಲಾದರೂ ಸರಿ ಗೆಲುವನ್ನು ಆಲೋಚಿಸುತ್ತಿರಿ. ಕ್ರಿಸ್ತನ ಮನಸ್ಸು, ಆಲೋಚನೆ ಇದುವೇ?

ಫಿಲಿಪ್ಪಿ ಸಭೆಗೆ ಅಪೊ. ಪೌಲನು ರೋಮಾಪುರದ ಸೆರೆಮನೆಯಲ್ಲಿದ್ದುಕೊಂಡು ಬರೆದಾಗ್ಯೂ ಅವನ ಪತ್ರ ಗೆಲುವಿನ ಆಲೋಚನೆಗಳಿಂದಲೇ ತುಂಬಿರುವದನ್ನು ಕಾಣಬಹುದು. "ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿ 4:13). "ನನ್ನ ದೇವರು ಕ್ರಿಸ್ತಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು" (ಫಿಲಿ. 4:19). "ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ; ಸಂತೋಷಪಡಿರಿ ಎಂದು ತಿರುಗಿ ಹೇಳುತ್ತೇನೆ" (ಫಿಲಿ. 4:4) ಎಂದೆಲ್ಲಾ ತನ್ನನ್ನೂ ಬಲಪಡಿಸಿಕೊಳ್ಳುತ್ತಾ, ಬೇರೆಯವರನ್ನೂ ಪ್ರೋತ್ಸಾಹ ಪಡಿಸುತ್ತಾನೆ. ಸೆರೆಮನೆಯಲ್ಲಿದ್ದಾಗ್ಯೂ ತನಗೆ ಮುಂದೆ ಯಾವ ಶಿಕ್ಷೆ ಉಂಟಾಗುವದೋ ಎಂದು ಕುಗ್ಗಿಹೋಗಲಿಲ್ಲ. ಸೆರೆಮನೆಯ ವಾಸ ಕಷ್ಟಕರವಾಗಿದ್ದರೂ ಅದರ ಕುರಿತಾಗಿ ಚಿಂತಿಸಿ ನಿರುತ್ಸಾಹಗೊಳ್ಳಲಿಲ್ಲ. ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ. ಬಡವನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು. ನಾನು ಸಂತೃಪ್ತನಾಗಿದ್ದರೂ, ಸಮೃದ್ಧಿಯುಳ್ಳವನಾಗಿದ್ದರೂ, ಹಸಿದವನಾಗಿದ್ದರೂ, ಕೊರತೆಯುಳ್ಳವನಾದರೂ ಯಾವ ತರದ ಸ್ಥಿತಿಯಲ್ಲಿರುವವನಾದರೂ ಅದರ ಗುಟ್ಟು ನನಗೆ ತಿಳಿದಿದೆ" (ಫಿಲಿ. 4:11–12) ಎಂದು ಹೇಳುತ್ತಾನೆ. ಅವನು ಒಮ್ಮೆಯಾದರೂ ಸೋಲಿನ ಮಾತನ್ನಾಡಲಿಲ್ಲ. ಕೆಲವು ಕಾರ್ಯಗಳನ್ನು ನಾವು ಕಲಿತುಕೊಳ್ಳುತ್ತೇವೆ, ಕೆಲವು ಕಾರ್ಯಗಳನ್ನು ಕರ್ತನು ಬೋಧಿಸುವನು, ಸತ್ಯವೇದ ಬೋಧಿಸುತ್ತದೆ. ಜಯಶಾಲಿಯಾದ ಕ್ರಿಸ್ತನು ಹೇಳುತ್ತಾನೆ –"ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು; ಹಾಗೆಯೇ ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು" (ಪ್ರಕ. 3:21) ಎಂದು.

ದೇವಜನರೇ, ಆದುದರಿಂದ ನಿಮ್ಮ ಕಣ್ಣುಗಳು ತಂದೆ ದೇವರ ಸಿಂಹಾಸನವನ್ನೇ ದೃಷ್ಟಿಸಲಿ. ಕರ್ತನು ಕಡೆಯವರೆಗೂ ಎಡವದಂತೆ ನಿಮ್ಮನ್ನು ಕಾಯುವನು. ಆತನೊಡನೆ ತನ್ನ ಸಿಂಹಾಸನದಲ್ಲಿ ಪರಿಶುದ್ಧರಾಗಿ ಕೂಡಿಸುವನು. ಯಾವಾಗ್ಯೂ ಎಲ್ಲಾ ಸಂದರ್ಭಗಳಲ್ಲೂ ಗೆಲುವಿನ ಚಿಂತನೆಯುಳ್ಳವರಾಗಿರ್ರಿ.

*ನೆನಪಿಗೆ : ಕ್ರಿಸ್ತನ ಅನ್ಯೋನ್ಯತೆಯಲ್ಲಿ ನಮ್ಮನ್ನು ಯಾವಾಗಲೂ ಜಯೋತ್ಸವದೊಡನೆ ಮೆರೆಸುತ್ತಾ ಆತನ ವಿಷಯವಾದ ಜ್ಞಾನವೆಂಬ ಸುವಾಸನೆಯನ್ನು ನಮ್ಮ ಮೂಲಕ ಎಲ್ಲಾ ಸ್ಥಳಗಳಲ್ಲಿ ವ್ಯಾಪನಗೊಳಿಸುತ್ತಾ ಬರುವ ದೇವರಿಗೆ ಸ್ತೋತ್ರ (2 ಕೊರಿಂ. 2:14).*



# ಅನುದಿನದ ಆಹಾರ

**ANUDHINADA AHARA - FEBRUARY 2015**

**ಫೆಬ್ರವರಿ – 2015**

ಮರ 16 ಹಣ್ಣು 2 Tree 16 Fruit 2

## ಪರಲೋಕದ ದ್ವಾರಗಳನ್ನು ತೆರೆಯುವದು ಹೇಗೆ?

"ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ" (ಮಲಾ. 3:10).

ದೇವರು ನಿಮ್ಮನ್ನು ಆಶೀರ್ವದಿಸುವಾಗ, ಅಲ್ಪಸ್ವಲ್ಪವಾಗಿ ಅಲ್ಲ; ಪರಲೋಕದ ದ್ವಾರಗಳನ್ನು ತೆರೆದು ಆಶೀರ್ವದಿಸುವನು. ನಮ್ಮ ದೇವರು ಅಳೆದು ಕೊಡುವವನಲ್ಲ; ತುಂಬಿಹೊರಸೂಸುವಂತೆ ಕೊಡುವಾತನು.

ದೇವರು ಪರಲೋಕದಲ್ಲಿರುವನು. ನಾವಾದರೋ ಭೂಮಿಯಲ್ಲಿರುವೆವು. ದೇವರು ಹೇಳುತ್ತಾನೆ "ಆಕಾಶವು ನನಗೆ ಸಿಂಹಾಸನ ಭೂಮಿಯು ನನಗೆ ಪಾದಪೀಠ" ಎಂದು (ಯೆಶಾ.66:1). ಆತನನ್ನು ನಾವು ಅಪ್ಪಾ ತಂದೆಯೇ ಎಂದು ಕರೆಯುತ್ತೇವೆ. ಆತನ ಬಲಗಡೆ ಕರ್ತನಾದ ಯೇಸುಕ್ರಿಸ್ತನು ಆಸೀನನಾಗಿರುವನು. ಅಲ್ಲಿಂದ ಪರಿಶುದ್ಧಾತ್ಮನು ಪಾರಿವಾಳದಂತೆ ಇಳಿದು ಬರುವನು. ಅಲ್ಲಿ ಜೀವಬಾಧ್ಯ ಪುಸ್ತಕದಲ್ಲಿ ಯಾರು ಕರ್ತನಾದ ಯೇಸು ಕ್ರಿಸ್ತನನ್ನು ತಮ್ಮ ರಕ್ಷಕನನ್ನಾಗಿ ಅಂಗೀಕರಿಸುವರೋ ಅವರ ಹೆಸರು ಬರೆಯಲ್ಪಟ್ಟಿರುವದು. ಅಂಥವರಿಗೆ ಬಾಡದ ಜಯ ಮಾಲೆ ಸಿದ್ಧವಾಗಿ ಇಡಲ್ಪಟ್ಟಿರುವದು.

ಅಂದು ಮೆಲ್ಕಿಜೆದೇಕನು ಅಬ್ರಹಾಮನನ್ನು ಆಶೀರ್ವದಿಸಿದಾಗ "ಭೂಮ್ಯಾಕಾಶಗಳನ್ನು ನಿರ್ಮಾಣ ಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಹಾಮನಿಗಾಗಲಿ" ಎಂದು ಹೇಳಿ ಆಶೀರ್ವದಿಸಿದನು (ಆದಿ. 14:19). ಆಕಾಶದಿಂದ ಬರುವ ಮಂಜು ಒಂದು ಆಶೀರ್ವಾದ (ಆದಿ. 27:28). ಮಳೆ ಒಂದು ಆಶೀರ್ವಾದ (ಕೀರ್ತ. 68:8). ಆಶೀರ್ವಾದಕ್ಕಾಗಿ ಹಂಬಲಿಸುವ ನಿಮ್ಮನ್ನು ಕರ್ತನು ನಿಶ್ಚಯವಾಗಿ ಆಶೀರ್ವದಿಸುವನು. ಎಲೀಯನು ಎಲೀಷನನ್ನು ಆಶೀರ್ವದಿಸುವಾಗ ಎರಡರಷ್ಟು ಆಶೀರ್ವಾದಗಳನ್ನು ಕೊಟ್ಟು ಆಶೀರ್ವದಿಸಿದನು (2ಅರಸು2:9). ದಾನಿಯೇಲನಿಗೆ ದೇವರು ಹತ್ತು ಪಾಲು ಹೆಚ್ಚು ಆಶೀರ್ವಾದಗಳನ್ನು ಕೊಟ್ಟು ಆಶೀರ್ವದಿಸಿದನು

(ದಾನಿ.1:20). ಒಳ್ಳೆಯ ನೆಲದಲ್ಲಿ ಬೀಜ ಬಿತ್ತುವಾಗ ಮೂವತ್ತರಷ್ಟು ಅರವತ್ತರಷ್ಟು ನೂರರಷ್ಟು ಫಲ ಪಡೆಯುತ್ತೇವೆ (ಮತ್ತಾ. 13:8). ಇಸಾಕನು ನೂರರಷ್ಟು ಫಲ ಪಡೆದನು (ಆದಿ.26:12).

ಬೆಳ್ಳಿಯೂ, ಬಂಗಾರವೂ ಕರ್ತನದು, ಭೂಮಿಯೂ ಅದರಲ್ಲಿರುವವುಗಳೆಲ್ಲವೂ ಕರ್ತನದು. ಆತನಂಥಹ ಐಶ್ವರ್ಯ ಸಂಪನ್ನರು ಯಾರೂ ಇಲ್ಲ. ಲೋಕ ಪ್ರಸಿದ್ಧವಾದ ರೈನಾರ್ಡ್ ಬೋಂಕೆ ಎಂಬ ಸೌವಾರ್ತಿಕರು, ತನ್ನ ಸೇವೆಯನ್ನು ಪ್ರಾರಂಭಿಸಿದಾಗ, ಬಡತನ ಅವರನ್ನು ಬಹಳವಾಗಿ ಕಾಡಿತು. ಮನೆಯ ಬಾಡಿಗೆ ಮುನ್ನೂರು ರೂಪಾಯಿಗಳನ್ನು ಕೊಡಲೂ ಕಷ್ಟಪಡುತ್ತಿದ್ದರು. ಒಮ್ಮೆ ಹೃದಯಭಾರದಿಂದ ಪ್ರಾರ್ಥಿಸುತ್ತಿದ್ದಾಗ ಕರ್ತನು ಮಾತನಾಡಿದನು. “ಮಗನೇ, ನಾನು ನಿನಗೆ ಮುನ್ನೂರು ರೂಪಾಯಿ ಅಲ್ಲ, ಮೂರು ಕೋಟಿ ರೂಪಾಯಿ ಕೊಡುವೆನು ಅಂದನು. ಪರಲೋಕ ಬಾಗಿಲುಗಳನ್ನು ತೆರೆದು, ಆಶೀರ್ವದಿಸುವೆನೆಂದು ದೇವರು ಹೇಳಿದಾಗ, ಆ ಸೇವಕರ ಅಂತರ್ಯ ಪರವಶಗೊಂಡಿತು. ಏನೇ ಆದರೂ ಹಣಕ್ಕಿಂತ ಆತ್ಮಗಳು ಬೆಲೆಯುಳ್ಳದ್ದಲ್ಲವೇ? ಆದ್ದರಿಂದ ಅವರು “ದೇವರೇ, ನನಗೆ ಮೂರುಕೋಟಿ ರೂಪಾಯಿ ಬದಲು ಮೂರು ಕೋಟಿ ಆತ್ಮಗಳನ್ನು ನೀಡು” ಎಂದು ಹೇಳಿ ಪ್ರಾರ್ಥಿಸಿದರು.

ಪರಲೋಕ ಎಂಬುದು ಒಂದು ದೊಡ್ಡ ಭಂಡಾರ, ಆತ್ಮ, ಪ್ರಾಣ, ಶರೀರಗಳಿಗೆ ಬೇಕಾದದ್ದೆಲ್ಲವೂ ಅಲ್ಲಿ ತುಂಬಿರುವದು. ನಿಮಗೆ ಆರೋಗ್ಯ ಬೇಕೇ? ಬಿಡುಗಡೆ ಬೇಕೆ? ಆದರಣೆ ಬೇಕೇ? ನೀವು ಕರ್ತನ ಬಳಿಗೆ ಬಂದು ಪರಲೋಕದ ಯಾವ ಭಾಗವನ್ನು ಕರ್ತನು ತೆರೆಯಬೇಕೆಂದು ಹೇಳಿರಿ. ನಿಶ್ಚಯವಾಗಿ ತೆರೆಯುವನು. ಮನುಷ್ಯನು ಕೊರತೆಪಡಬಹುದು. ಒಂದು ದೇಶದ ಖಜಾನೆ ಖಾಲಿಯಾಗಬಹುದು. ಆದರೆ ರಾಜಾಧಿರಾಜನಾದ ಕರ್ತಾಧಿಕರ್ತನಾದ ದೇವರ ಐಶ್ವರ್ಯಕ್ಕೆ ಎಂದೂ ಕೊರತೆ ಉಂಟಾಗುವದಿಲ್ಲ. ಆತನ ಕೃಪೆ ನಿಮಗೆ ಸಾಕು. ಆಗ ಎಲ್ಲವೂ ದೊರೆಯುವದು.

ಪರಲೋಕದ ಬಾಗಿಲು ತೆರೆಯಬೇಕಾದರೆ ಮೊದಲನೆಯದಾಗಿ ನೀವು ದೇವ ರಾಜ್ಯವನ್ನೂ, ಆತನ ನೀತಿಯನ್ನು ಹುಡುಕಿರಿ. ಆಗ ಇವೆಲ್ಲವುದರೊಂದಿಗೆ ಬೇರೆ ಎಲ್ಲವನ್ನೂ ಸೇರಿಸಿ ಕರ್ತನು ಕೊಡುವನು. ಒಂದು ಮೀನು ಮರಿ “ಅಯ್ಯೋ, ಸಮುದ್ರದ ನೀರೆಲ್ಲಾ ಒಣಗಿ ಹೋದರೆ ಏನು ಮಾಡುವದು” ಎಂದು ಚಿಂತೆ ಮಾಡಿತಂತೆ. ಒಂದು ದೊಡ್ಡ ಗುಬ್ಬಚ್ಚಿ ಯೋಸೇಫನ ಕಣಜದಲ್ಲಿ ಗೂಡು ಕಟ್ಟಿ, ಧಾನ್ಯ ಮುಗಿದು ಹೋದರೆ ಏನು ಮಾಡುವುದು? ಎಂದು ವ್ಯಥೆಪಟ್ಟಿತಂತೆ. ಒಬ್ಬ ಚಿಕ್ಕ ಹುಡುಗ ಆಕಾಶಮಂಡಲದಲ್ಲಿರುವ ಗಾಳಿ ಮುಗಿದು ಹೋದರೆ ಏನು ಮಾಡುವದು ಎಂದು ಚಿಂತೆ ಮಾಡಿದನಂತೆ. ಹಾಗೆಯೇ ಇಂದು ಪ್ರಪಂಚದ ಜನರು ಚಿಂತೆ ಪಡುತ್ತಿರುವರು.

ಎರಡನೆಯದಾಗಿ ಕರ್ತನ ಮೇಲೆ ನಂಬಿಕೆ ಇರಬೇಕು. ಕರ್ತನು ಇದ್ದಾನೆ, ಆತನನ್ನು ನಂಬುವವರಿಗೆ ಯಾವದೇ ಕೊರತೆ ಉಂಟಾಗುವದಿಲ್ಲ ಎಂದು ದೃಢ ನಿಶ್ಚಯವಿರಬೇಕು.



ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಅರಣ್ಯದಲ್ಲಿ ಅವರ ನಾಲ್ವತ್ತು ವರುಷಗಳ ಪ್ರಯಾಣದಲ್ಲಿ ಕೊರತೆಗಳು ಉಂಟಾದರೂ ಅವರ ಎಲ್ಲಾ ಅಗತ್ಯತೆಗಳನ್ನು ಕರ್ತನು ಪೂರೈಸಿದನು. ಕೊರತೆಯಾದಾಗ ಅವರ ನಾಯಕನಾದ ಮೋಶೆ ಆಹಾರಕ್ಕಾಗಿ ಕಾಡು ಮೇಡುಗಳಲ್ಲಿ ಹುಡುಕಲು ಹೋಗಲಿಲ್ಲ. ಮೊದಲು ತಮ್ಮನ್ನು ಪೋಷಿಸುವ ಕರ್ತನ ಬಳಿ ಪ್ರಾರ್ಥಿಸಿದನು. ಆಗ ಕರ್ತನು ಅವನ ಮೊರೆಯನ್ನು ಬಿನ್ನಹವನ್ನು ಲಾಲಿಸಿ ದೇವದೂತರ ಆಹಾರವಾದ ಮನ್ನವನ್ನು ಆಕಾಶದ ದ್ವಾರಗಳನ್ನು ತೆರೆದು ಸುರಿಯುವಮಾಡಿದನು. ಅದನ್ನು ತಿಂದ ಇಸ್ರಾಯೇಲ್ಯರು ಘೇಂಡಾಮೃಗದಷ್ಟು ಬಲಶಾಲಿಗಳಾಗಿ ಕಾನಾನಿನಲ್ಲಿದ್ದ ಏಳು ಜನಾಂಗಗಳನ್ನು ಮೂವತ್ತೊಂದು ಅರಸರನ್ನೂ ಜಯಿಸಿ ಕಾನಾನನ್ನು ಸ್ವತಂತ್ರಿಸಿಕೊಂಡರು.

ಹೊಸ ಒಡಂಬಡಿಕೆಯ ಕಾಲದಲ್ಲಿ ಜೀವಿಸುತ್ತಿರುವ ನಮಗಾದರೋ ದೇವರ ವಾಕ್ಯಗಳು ಪರಲೋಕದ ಮನ್ನವಾಗಿರುವದು. ಕ್ರಿಸ್ತನೇ ಆ ವಾಕ್ಯವಾಗಿರುವನು. ಯೋಹಾನನ ಸುವಾರ್ತೆಯಲ್ಲಿ ಆದಿಯಲ್ಲಿ ವಾಕ್ಯವಿತ್ತು. ಆ ವಾಕ್ಯ ದೇವರ ಬಳಿಯಿತ್ತು. ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವವನು ಆದಿಯಲ್ಲಿ ದೇವರ ಬಳಿ ಇದ್ದನು. ಆತನಲ್ಲಿ ಜೀವವಿತ್ತು. ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು” (ಯೋಹಾ. 1:3) ಎಂದು ಬರೆಯಲ್ಪಟ್ಟಿದೆ. ತನ್ನ ದೇಹವನ್ನು ತಿಂದು ತನ್ನ ರಕ್ತವನ್ನು ಕುಡಿಯುವವರಿಗೆ ನಿತ್ಯಜೀವವುಂಟು ಎಂದು ಕ್ರಿಸ್ತನು ತನ್ನ ಶಿಷ್ಯರಿಗೆ ಹೇಳಿರುವನು. ಯಾರ್ಯಾರು ಆತನ ಹೆಸರಿನಲ್ಲಿ ನಂಬಿಕೆ ಇಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಯೇಸುಕ್ರಿಸ್ತನು ತನ್ನ ಹೆಸರಿನಲ್ಲಿ ತಂದೆಯನ್ನು ಏನು ಬೇಡಿಕೊಂಡರೂ ಅದನ್ನು ಅನುಗ್ರಹಿಸುವನು ಎಂದು ಹೇಳಿರುವನು.

ದೇವಜನರೇ, ನಿಮಗೆ ಪರಲೋಕದ ಬಾಗಿಲು ತೆರೆದು ಪರಲೋಕದ ಹಾಗೂ ಇಹಲೋಕದ ಆಶೀರ್ವಾದಗಳನ್ನು ಪಡೆಯಬೇಕಿದ್ದಲ್ಲಿ ಕ್ರಿಸ್ತನ ನಾಮದಲ್ಲಿ ನಂಬಿಕೆ ಇಟ್ಟು ಪೂರ್ಣ ಹೃದಯದಿಂದ ಕರ್ತನನ್ನು ಅಂಗೀಕರಿಸಿಕೊಳ್ಳಿರಿ. ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕ ಪಡಿರಿ. ನಿಶ್ಚಯವಾಗಿ ಆಕಾಶದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಆಶೀರ್ವಾದಗಳನ್ನು ತಂದೆ ದೇವರು ನಿಮಗೆ ನೀಡುವನು.

## ವಾಗ್ದಾನ ವಚನ – ಯೆರೆ. 31:16

**“ನಿನ್ನ ಧ್ವನಿಯು ಗೋಳಾಗದಿರಲಿ, ನಿನ್ನ ಕಣ್ಣು ನೀರು ಸುರಿಸದಿರಲಿ; ನಿನ್ನ ಪ್ರಯಾಸವು ಸಾರ್ಥಕವಾಗುವದು; ಇದು ಯೆಹೋವನ ನುಡಿ”**

## ನಮ್ಮ ಹೋರಾಟದ ಆಯುಧಗಳು

ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡ ಅಲ್ಲ. ರಾಜತ್ವಗಳ ಮೇಲೆಯೂ, ಅಧಿಕಾರಗಳ ಮೇಲೆಯೂ. ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ (ಎಫೆ. 6:12).

- ಸುವಾರ್ತೆಯು ದೇವರ ಬಲಸ್ವರೂಪವಾಗಿದೆ. (ರೋಮಾ. 1:16).
- ಬಲವುಳ್ಳವನಾಗಿರು ಮತ್ತು ಪೂರ್ಣ ಧೈರ್ಯದಿಂದಿರು (ಯೆಹೋ. 1:7).
- ಕರ್ತನಿಗೆ ಭಯಪಡುವುದರಿಂದ ಕೇವಲ ನಿರ್ಭಯ (ಜ್ಞಾನೋ. 14:26).
- ಕ್ರಿಸ್ತೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು (2 ತಿಮೋ. 2:11).
- ದೇವರ ಆಯುಧವಾದ ಪವಿತ್ರಾತ್ಮನ ವರಗಳನ್ನು ಉಪಯೋಗಿಸಿಕೊಳ್ಳುವದೇ ಯಶಸ್ವಿಯಾದ ಸುವಾರ್ತಾ ಸೇವೆಯಾಗಿದೆ.
- ಲೋಕವನ್ನು ಜಯಿಸುವ ಸುವಾರ್ತಾಸೇವೆ ಅಂದರೆ ಪವಿತ್ರಾತ್ಮನಿಂದ ಕೂಡಿದ ಸುವಾರ್ತಾಸೇವೆಯೇ.
- ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು (ಅಪೊ. 1:8).

## ಕೃಪೆ

1. ಶಾಶ್ವತವಾದ ಕೃಪೆ : ಕರ್ತನಿಗೆ ಕೃತಜ್ಞತಾಸ್ತುತಿ ಮಾಡಿರಿ, ಆತನು ಒಳ್ಳೆಯವನು, ಆತನ ಕೃಪೆಯು ಶಾಶ್ವತವಾದದ್ದು (ಕೀರ್ತ. 106:1, 107:1).
2. ಆವರಿಸಿಕೊಳ್ಳುವ ಕೃಪೆ : ಕರ್ತನಲ್ಲಿ ಭರವಸವಿಟ್ಟವರನ್ನು ಆತನ ಕೃಪೆಯು ಆವರಿಸಿಕೊಳ್ಳುವದು (ಕೀರ್ತ. 32:10).
3. ಬಿಟ್ಟು ಅಗಲದ ಕೃಪೆ : ಬೆಟ್ಟಗಳು ಸ್ಥಳ ಬಿಟ್ಟು ಹೋದಾವು, ಗುಡ್ಡಗಳು ಕದಲಿಯಾವು, ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟು ಹೋಗದು (ಯೆಶಾ. 54:10).
4. ಸಾಕಾಗುವ ಕೃಪೆ : ನನ್ನ ಕೃಪೆಯೇ, ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣ ಸಾಧಕವಾಗುತ್ತದೆ (2 ಕೊರಿ. 12:9).
5. ಅಮೂಲ್ಯವಾದ ಕೃಪೆ : ದೇವರೇ ನಿನ್ನ ಸಂಕಲ್ಪಗಳು ನನ್ನ ಎಣಿಕೆಯಲ್ಲಿ ಎಷ್ಟೋ ಗೌರವವಾಗಿದೆ (ಅಮೂಲ್ಯವಾಗಿದೆ).



## ಎನ್ನೊಂದಿಗಿರು ಸಂಜೆಯಾಯಿತು

ಹೆನ್ರಿ ಫ್ರಾನ್ಸಿಸ್ ಲೈಟ್ ಎಂಬ ಈ ಸಂಗೀತದ ರಚನೆಗಾರನು ಇಂಗ್ಲೆಂಡಿನ ಮೀನುಗಾರರ ಗ್ರಾಮದ ಒಂದು ಚಿಕ್ಕ ಸಭೆಗೆ ಬೋಧಕರಾಗಿ ಡಿಪೋನ್‌ಶೈರ್ ಎಂಬಲ್ಲಿ 23 ವರ್ಷ ಸೇವೆಸಲ್ಲಿಸಿದರು. ತನ್ನ 54ನೇ ವಯಸ್ಸಿನಲ್ಲಿ ಒಂದು ದೊಡ್ಡ ಸಭೆಗೆ ಬೋಧಕರಾಗಿ ನೇಮಕವಾದರು. ಎನ್ನೊಂದಿಗಿರು ಸಂಜೆಯಾಯಿತು ಈ ಸಂಗೀತವನ್ನು ಅವರು ಗತಿಸುವ ಮೊದಲು ರಚಿಸಿದ್ದರು. ಎಮ್ಮಾಹುವಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರೊಂದಿಗಿನ ಪುನರುತ್ಥಾನ ಹೊಂದಿದ ಸ್ವಾಮಿಯ ಸಂಭಾಷಣೆಯು ಇವರನ್ನು ಈ ಸಂಗೀತದ ರಚನೆಗೆ ಪ್ರೇರಿಸಿತು (ಲೂಕ. 24:29).

ನಾಲ್ಕನೇ ನುಡಿಯಲ್ಲಿ ಕ್ರೈಸ್ತನಂಬಿಕೆಯನ್ನು ಕುರಿತು ಲೈಟ್ ಬರೆದಿದ್ದಾರೆ. ಆತನಿಗೆ ತಾನು ಆಸ್ತಮಾ ಮತ್ತು ಕ್ಷಯ ರೋಗಕ್ಕೆ ಒಳಗಾಗಿ ಮರಣಕ್ಕೆ ಸಮೀಪವಾಗಿದ್ದೇನೆ ಎಂಬುದು ತಿಳಿದಿತ್ತು. ಮರಣಾಂಧಕಾರ ಕವಿದಾಗ ತಾನು ಒಬ್ಬಂಟಿಗನೆಂಬ ಬಾಧೆಗೆ ಒಳಗಾಗಿದ್ದರು. ಆದರೆ ನಾವು ಒಂಟಿಯಲ್ಲ ನಮ್ಮ ದೇವರಾದ ಕರ್ತನು ಆಧಾರವಿಲ್ಲದವರ ಆಧಾರ, ಸಹಾಯವಿಲ್ಲದವರಿಗೆ ಸಹಾಯಕ, ಆತನು ಮಾರ್ಪಡದಾತನು, ಆತನ ಕಾಪಾಡುವಿಕೆಯ ಸುರಕ್ಷತೆಯೇ ನಮ್ಮ ಭರವಸವಲ್ಲವೇ; ಆತನು ನಮ್ಮನ್ನು ಕೈಬಿಡುವುದಿಲ್ಲ, ತೊರೆದುಬಿಡುವದಿಲ್ಲ (ಕೀರ್ತ. 27:1–4).

## ಎಚ್ಚರವು ಅಗತ್ಯ

- ಯೋಚನೆಗಳಲ್ಲಿ ಎಚ್ಚರವಾಗಿರು! ಅದೇ ವಾಕ್ಯವಾಗಿ ಹೊರಬರುತ್ತದೆ. (ಮತ್ತಾ.12:34)
- ವಾರ್ತೆಗಳಲ್ಲಿ ಎಚ್ಚರವಾಗಿರು! ಅದೇ ಕಾರ್ಯರೂಪವಾಗಿ ಕಾಣಲ್ಪಡುತ್ತದೆ. (ಜ್ಞಾನೋ. 10:19)
- ಕಾರ್ಯಗಳಲ್ಲಿ ಎಚ್ಚರವಾಗಿರು! ಅದೇ ಅಭ್ಯಾಸವಾಗಿ ಮಾರ್ಪಡುತ್ತದೆ. (ತೀತ. 3:14).
- ಅಭ್ಯಾಸಗಳಲ್ಲಿ ಎಚ್ಚರವಾಗಿರು! ಅದೇ ಒಳ್ಳೆಯ ನಡತೆಯಾಗಿ ಮೇಲೇಳುವದು. (1 ಕೊರಿ. 15:23)
- ಒಳ್ಳೇ ನಡತೆಯಲ್ಲಿ ಎಚ್ಚರವಾಗಿರು! ಅದೇ ನಿನ್ನನ್ನು ಸೃಷ್ಟಿಸುತ್ತದೆ. (1 ಕೊರಿಂ. 14:14)

ಪ್ರಾಣವಿರುವವರೆಗೂ ಯೆಹೋವನನ್ನು ಸ್ತುತಿಸುವೆನು; ಜೀವಮಾನವೆಲ್ಲಾ ನನ್ನ ದೇವರನ್ನು ಕೊಂಡಾಡುವೆನು ಕೀರ್ತನೆ 146:2.

## ವಿದ್ಯಾಭ್ಯಾಸಕ್ಕೆ ಮಾರ್ಗಮಾಡಿದ ವಿಧವೆಯ ಪ್ರಾರ್ಥನೆ

ಪೆನ್‌ಸಿಲ್ವೇನಿಯಾ ಎಂಬ ಸ್ಥಳದಲ್ಲಿ ಬೋಧಕರಿದ್ದರು. ಒಂದು ದಿನ ಅವರು ತಮ್ಮ ಕುದುರೆ ಸವಾರಿ ಮಾಡುತ್ತಾ ಬೇರೊಂದು ಸ್ಥಳಕ್ಕೆ ಹೋಗುತ್ತಿದ್ದಾಗ, ಒಂದು ಗುಡಿಸಲಿನಿಂದ ಪ್ರಾರ್ಥನೆಯ ಧ್ವನಿ ಕೇಳಿಸುತ್ತಿತ್ತು. ಬೋಧಕರು ನಿಂತು ಗಮನಿಸಿದರು. ಅಲ್ಲಿ ಒಬ್ಬ ಬಡ ವಿಧವೆಯು ತನ್ನ ಇಬ್ಬರು ಗಂಡುಮಕ್ಕಳನ್ನು ಪಕ್ಕದಲ್ಲಿಟ್ಟುಕೊಂಡು ಅವರಿಗಾಗಿ ಹೀಗೆ ಪ್ರಾರ್ಥನೆ ಮಾಡುತ್ತಿದ್ದಳು.

"ಕರ್ತನೇ, ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿರಿ ಸ್ವಾಮಿ" ಎಂದು ಆಕೆ ಶ್ರದ್ಧೆಯಿಂದ ಪ್ರಾರ್ಥನೆ ಮಾಡುತ್ತಿರುವದನ್ನು ಕೇಳಿದ ಆ ಬೋಧಕರು ಕುದುರೆಯಿಂದಿಳಿದು ಗುಡಿಸಲಿನೊಳಗೆ ಹೋದರು. ಆ ತಾಯಿಯ ಬಳಿ ಮಾತಾಡಿ ಒಬ್ಬ ಮಗುವನ್ನು ತನ್ನೊಂದಿಗೆ ಕರೆದುಕೊಂಡು ಹೋದರು. ಆ ಮಗನು ಹುಟ್ಟಿನಿಂದ ಅಂಗಹೀನನಾಗಿದ್ದನು. ಒಂದು ವಿದ್ಯಾಸಂಸ್ಥೆಯೊಂದಿಗೆ ಸಂಪರ್ಕಿಸಿ ಅವನು ಎಲ್ಲಿಯವರೆಗೆ ಓದಲು ಬಯಸುವನೋ ಅದಕ್ಕೆ ಏರ್ಪಾಟು ಮಾಡಿದರು.

ವಿಲ್ಲಿಯಂ ಎಂಬ ಹೆಸರಿನ ಅಂಗಹೀನನಾದ ಹುಡುಗನು ಅನಂತರದ ದಿನಗಳಲ್ಲಿ 1 ಕೋಟಿಗೂ ಅಧಿಕ ಸಂಖ್ಯೆಯಲ್ಲಿ ಮುದ್ರಿತವಾದ ಒಂದು ಪುಸ್ತಕವನ್ನು ಬರೆದನು. ಆಸರೆ ಇಲ್ಲದವರಿಗೆ ಆಸರೆ ನೀಡುವ ಕರ್ತನಲ್ಲಿ ಆಸರೆಗಾಗಿ ಪ್ರಾರ್ಥನೆಯೊಂದಿಗೆ ಆತನನ್ನು ಆಶ್ರಯಿಸೋಣ.

## ಜ್ಞಾನ ಕೊಡುವ ಕರ್ತನು

ತಂತಿ ವರ್ತಮಾನವನ್ನು ಕಂಡು ಹಿಡಿದ ವಿಜ್ಞಾನಿಯ ಹೆಸರು ಮೋರ್ಸ್ ಎಂಬದು. ಅವರ ಬಳಿ ಕೆಲವು ಪತ್ರಿಕೆ ಪ್ರತಿನಿಧಿಗಳೂ "ವಿಜ್ಞಾನಿಯವರೇ, ನಿಮ್ಮ ಸಂಶೋಧನೆಯಲ್ಲಿ ಯಾವದಾದರೂ ತಡೆಗಳು ಬಂದರೆ ಅದನ್ನು ನೀಗಿಸಲು ಏನು ಮಾಡುವಿರಿ" ಎಂದು ಕೇಳಿದಾಗ, "ಆ ಸಮಯಗಳಲ್ಲಿ ಎಲ್ಲವನ್ನೂ ಹಾಗೆಯೇ ಬಿಟ್ಟು ಮೊಣಕಾಲೂರಿ, ಕರ್ತನೇ, ನನಗೆ ಆಲೋಚನೆ ಕೊಡು ಸ್ವಾಮೀ, ಜ್ಞಾನ ವಿವೇಕಗಳನ್ನು ಕೊಡಪ್ಪಾ ಎಂದು ಬೇಡುವಾಗ ಆತನೇ ಜ್ಞಾನವನ್ನು ಕೊಡುವದು ಮಾತ್ರವಲ್ಲದೆ ನನ್ನ ಸಂಶೋಧನೆಯನ್ನು ಯಶಸ್ವಿಗೊಳಿಸುವನು" ಎಂದು ಉತ್ತರ ಕೊಟ್ಟನು. ಆತನು ಕಂಡು ಹಿಡಿದ ತಂತಿ ವರ್ತಮಾನದ ಮೊಟ್ಟಮೊದಲ ವಾರ್ತೆ "ಇದು ಕರ್ತನ ಮಹತ್ವವಾದ ಕಾರ್ಯ" ಎಂಬದೇ.



## ಕರ್ತನು ಕೊಡುವ ಅಧಿಕಾರ

ಯೇಸುಕ್ರಿಸ್ತನು ತನ್ನ ಮಕ್ಕಳಾದ ನಮಗೆ ತನ್ನ ಅಧಿಕಾರವನ್ನು ಅನುಗ್ರಹಿಸಿದ್ದಾನೆ. ಆ ಅಧಿಕಾರ ಯಾವುದು? ಬಲ ಯಾವುದು? ಎಂದು ತಿಳಿದು ದೇವಮಕ್ಕಳು ಜಯಶಾಲಿಗಳಾಗಬೇಕು.

1. ಆತನ ಮಕ್ಕಳಾಗುವ ಅಧಿಕಾರ (ಯೋಹಾ. 1:12).
2. ಎಲ್ಲಾತರದ ರೋಗಗಳನ್ನು ವಾಸಿಮಾಡುವ ಅಧಿಕಾರ (ಮತ್ತಾ. 10:1).
3. ವೈರಿಯ ಮೇಲೆ ಅಧಿಕಾರ (ಲೂಕ. 10:19).
4. ಸೃಷ್ಟಿಯ ಮೇಲೆ ಅಧಿಕಾರ (ಕೀರ್ತ. 8:6).
5. ಕಟ್ಟುವ ಅಧಿಕಾರ (ಮತ್ತಾ. 12:29).
6. ಸತ್ತವರ ಮೇಲೆ ಅಧಿಕಾರ (ಮತ್ತಾ. 10:8).

ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವುದು. ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿ ಬಿಚ್ಚಲ್ಪಟ್ಟಿರುವದು. ಮತ್ತಾ 16:19. ದೇವಮಕ್ಕಳೇ, ನಿಮ್ಮ ಹಕ್ಕನ್ನು ಅರಿತುಕೊಳ್ಳಿರಿ, ಜಯಶಾಲಿಗಳಾಗಿರಿ.

### ಜೀವಸ್ವರೂಪನಾದ ದೇವರೊಂದಿಗೆ ಸಂಭಾಷಿಸಲು ನಮಗೆ ಅಗತ್ಯವಾದ ಕಾರ್ಯಗಳು

| | | |
|---|---|---|
| ಅ. | ಅನುದಿನವೂ ಪ್ರಾರ್ಥಿಸಲು | – ಕೃಪೆಯನ್ನು ಅನುಗ್ರಹಿಸು |
| ಆ. | ಆತ್ಮಪ್ರೇರಿತರಾಗಿ ಪ್ರಾರ್ಥಿಸಲು | – ಅಭಿಷೇಕವನ್ನು ಅನುಗ್ರಹಿಸು |
| ಇ. | ಎಡೆ ಬಿಡದೆ ಪ್ರಾರ್ಥಿಸಲು | – ದಾಹವನ್ನು ಅನುಗ್ರಹಿಸು |
| ಈ. | ಯಾವಾಗಲೂ ಪ್ರಾರ್ಥಿಸಲು | – ಉಜ್ಜೀವನವನ್ನುಅನುಗ್ರಹಿಸು |
| ಉ. | ಅನ್ಯೋನ್ಯತೆಯಿಂದ ಪ್ರಾರ್ಥಿಸಲು | – ಸ್ನೇಹಿತರನ್ನು ಅನುಗ್ರಹಿಸು |
| ಊ. | ಏಕಮನಸ್ಸಿನಿಂದ ಪ್ರಾರ್ಥಿಸಲು | – ಒಗ್ಗಟ್ಟನ್ನು ಅನುಗ್ರಹಿಸು |
| ಋ. | ವಿಶ್ರಮಿಸದೆ ಪ್ರಾರ್ಥಿಸಲು | – ಬಲವನ್ನು ಅನುಗ್ರಹಿಸು |
| ಎ. | ಕಣ್ಣೀರಿನಿಂದ ಪ್ರಾರ್ಥಿಸಲು | – ಆತ್ಮಭಾರವನ್ನು ಅನುಗ್ರಹಿಸು |
| ಏ. | ಹೃದಯದಿಂದ ಪ್ರಾರ್ಥಿಸಲು | – ದರ್ಶನವನ್ನು ಅನುಗ್ರಹಿಸು |
| ಐ. | ಶ್ರದ್ಧೆಯಿಂದ ಪ್ರಾರ್ಥಿಸಲು | – ಬಯಕೆಯನ್ನು ಅನುಗ್ರಹಿಸು |

## ನಿಜವಾದ ಪ್ರಾರ್ಥನೆ

ಇಂಗ್ಲೆಂಡ್ ದೇಶದಲ್ಲಿ ಒಂದು ಆತ್ಮೀಯ ಕೂಟವು ಏರ್ಪಡಿಸಲ್ಪಟ್ಟಿತು. ವಿಲ್‌ಫರ್ ಚಾಪ್‌ಮ್ಯಾನ್ ಎಂಬ ಸುವಾರ್ತಿಕರು ಆ ಕೂಟದಲ್ಲಿ ಸುವಾರ್ತೆಯನ್ನು ಸಾರಲು ಕರೆಯಲ್ಪಟ್ಟಿದ್ದರು. ಆ ಕೂಟವು ನಡೆಯುವಂತಹ ಕ್ರೀಡಾಂಗಣಕ್ಕೆ ಅವರು ಬಂದಾಗ ಅವರಿಗೆ ತುಂಬಾ ಬೇಸರವಾಯಿತು. ಏಕೆಂದರೆ ಆ ದೊಡ್ಡ ಕ್ರೀಡಾಂಗಣದಲ್ಲಿ ಸ್ವಲ್ಪ ಜನರೇ ಇದ್ದರು.

ಅವರು ಸೋತುಹೋದ ಆ ಸ್ಥಿತಿಯಲ್ಲಿದ್ದಾಗ ಅವರಿಗೆ ಒಂದು ಚೀಟಿ ಕೊಡಲ್ಪಟ್ಟಿತು. ಅದರಲ್ಲಿ ಅಮೇರಿಕಾ ದೇಶದ ಹೈಡ್ ಎಂಬವರು ಈ ಕೂಟಕ್ಕಾಗಿ ಒಂದು ಕೋಣೆಯಲ್ಲಿ ಪ್ರಾರ್ಥಿಸುತ್ತಿರುವುದಾಗಿ ಬರೆದಿತ್ತು. ತಕ್ಷಣವೇ ಏನು ಆಶ್ಚರ್ಯ. ಆ ಕ್ರೀಡಾಂಗಣವೇ ತುಂಬುವಂತಹ ಜನಸಮೂಹವು ಆವರಿಸಲು ಪ್ರಾರಂಭಿಸಿತು. ಆ ದಿನದಲ್ಲಿ ದೊಡ್ಡ ಆಶೀರ್ವಾದ, ಅನೇಕರಿಗೆ ಬಿಡುಗಡೆ, ಅನೇಕರು ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿದರು. ದೊಡ್ಡ ಜಯ!

ಕೂಟವು ಮುಗಿದ ನಂತರ ವಿಲ್‌ಫರ್ ಹೈಡ್‌ರವರ ಬಳಿ ಹೋಗಿ ಅವರಿಗಾಗಿ ಪ್ರಾರ್ಥಿಸಲು ಕೇಳಿಕೊಂಡರು. ಇಬ್ಬರೂ ಮೊಣಕಾಲೂರಿದರು. ಐದು ನಿಮಿಷಗಳಾದರೂ ಆ ಹೈಡ್ ಏನನ್ನೂ ಹೇಳದೇ, ಹಾಗೆಯೇ ದೊಡ್ಡ ನಿಟ್ಟುಸಿರನ್ನು ಬಿಟ್ಟು, “ಕರ್ತನೇ” ಎಂದರು – ಹಾಗೆಯೇ ದೇವರ ಪ್ರಸನ್ನತೆಯು ಇಬ್ಬರನ್ನೂ ತುಂಬಿಸಿತು.

ಅಂದೇ ವಿಲ್‌ಫರ್ ಹೃದಯದಾಳದಿಂದ ಪ್ರಾರ್ಥಿಸುವದನ್ನು ಅರ್ಥಮಾಡಿಕೊಂಡರು. ದೇವಮಗುವೇ, ನಾವು ಯಾವುದೋ ಕರ್ತವ್ಯಕ್ಕಾಗಿಯೋ, ಸಂಪ್ರದಾಯಕ್ಕೋ ಪ್ರಾರ್ಥಿಸುತ್ತೇವೋ? ಅಥವಾ ಹೃದಯದಾಳದಿಂದ ಪ್ರಾರ್ಥಿಸುತ್ತೇವೋ?

### ಪ್ರಪಂಚದ ಅತಿ ದೊಡ್ಡ ಸತ್ಯವೇದ!

ಲಾಸ್ ಎಂಜಲ್ಸ್ ನಗರದಲ್ಲಿರುವ ಒಬ್ಬ ಬಡಗಿ ತನ್ನಿಂದ ತಯಾರಿಸಲ್ಪಟ್ಟಂಥ ಪ್ರಪಂಚದಲ್ಲಿ ಅತಿ ದೊಡ್ಡದಾದ ಸತ್ಯವೇದವನ್ನು ಇಟ್ಟಿರುವನು. ಅದರ ಎತ್ತರ 8 ಅಡಿ 2 ಅಂಗುಲ, ಅಗಲ 3 ಅಡಿ 8 ಅಂಗುಲ, ಉದ್ದ 2 ಅಡಿ 10 ಅಂಗುಲ, ಅದರಲ್ಲಿನ ಅಕ್ಷರಗಳನ್ನು ಕೈಗಳಿಂದ ಬರೆದಿಡಲಾಗಿದೆ. ಇದರ ತೂಕ ಹೆಚ್ಚು ಕಡಿಮೆ ಅರ್ಧಟನ್ (500 ಕಿಲೋ ಗ್ರಾಂ).



## ನೀನೂ ಪ್ರಾರ್ಥನೆ ಮಾಡಬಹುದು – ಹೇಗೆ?

- ಅಂತರಂಗದಲ್ಲಿ ಪ್ರಾರ್ಥಿಸು (ಮತ್ತಾಯ 6:6).
- ಒಟ್ಟಾಗಿ ಸೇರಿ ಪ್ರಾರ್ಥಿಸು (ಮತ್ತಾಯ 18:20).
- ಸ್ತೋತ್ರದಿಂದ ಕೂಡಿದ ಪ್ರಾರ್ಥನೆಯಲ್ಲಿ ಎಚ್ಚರವಾಗಿರು (ಕೊಲೊ. 4:2).
- ಶೋಧನೆಗೊಳಗಾಗದಂತೆ ಪ್ರಾರ್ಥಿಸು (ಮತ್ತಾ. 26:41).
- ಹೃದಯದ ಸಾರವನ್ನು ಹೊಯ್ದು ಪ್ರಾರ್ಥಿಸು (ಪ್ರಲಾ. 2:19).
- ತಗ್ಗಿಸಿಕೊಂಡು ಪ್ರಾರ್ಥನೆ ಮಾಡು (2 ಪೂ.ವೃ. 7:14).

### ಯಾವಾಗ!

- ರಾತ್ರಿಯ ಜಾವದ ಆರಂಭದಲ್ಲಿ ಗೋಳಾಡಿರಿ (ಪ್ರಲಾ. 2:19).
- ಬೆಳಿಗ್ಗೆ ಸಿದ್ಧವಾಗಿದ್ದು ಪ್ರಾರ್ಥಿಸು (ವಿಮೋ. 34:2).
- ಹಗಲಿರುಳು ವಿಜ್ಞಾಪನೆಗಳಲ್ಲಿ ನೆಲಗೊಂಡಿರು (1 ತಿಮೊ. 5:5).
- ಕಷ್ಟಕಾಲದಲ್ಲಿ ದೇವರಿಗೆ ಮೊರೆಯಿಡು (ಕೀರ್ತ. 50:15).
- ಯಾರ ಮೇಲಾದರೂ ವಿರೋಧವಿದ್ದರೆ ಅದನ್ನು ಕ್ಷಮಿಸಿ ಪ್ರಾರ್ಥಿಸು (ಮಾರ್ಕ.11:25).
- ಭೋಜನಕ್ಕಿಂತ ಮೊದಲು ಪ್ರಾರ್ಥಿಸು (1 ತಿಮೊ. 4:3–5).
- ಬಾಧೆ ಪಡುವಾಗ ಪ್ರಾರ್ಥನೆ ಮಾಡು (ಯಾಕೋ. 5:13).

## ಸತ್ಯವೇದವೂ ನಾನೂ

1. ನಾನು ಕತ್ತಲೆಯಲ್ಲಿರುವಾಗ ಸತ್ಯವೇದವು ನನಗೆ ಬೆಳಕಾಗಿದೆ.
2. ನಾನು ಒಂಟಿಯಾಗಿರುವಾಗ ಸತ್ಯವೇದವು ನನಗೆ ಸ್ನೇಹಿತನಾಗಿದೆ.
3. ನಾನು ಮನಗುಂದಿ ಹೋಗುವಾಗ, ಸತ್ಯವೇದವು ನನಗೆ ಚೈತನ್ಯವಾಗಿದೆ.
4. ನಾನು ಹಸಿದಿರುವಾಗ ಸತ್ಯವೇದವು ನನಗೆ ಮನ್ನವಾಗಿದೆ.
5. ನಾನು ದಾಹಗೊಂಡಿರುವಾಗ ಸತ್ಯವೇದವು ನನಗೆ ಪಾನವಾಗಿದೆ.
6. ನಾನು ದಾರಿ ತಪ್ಪಿದಾಗ ಸತ್ಯವೇದವು ನನಗೆ ಮಾರ್ಗದರ್ಶನವಾಗಿದೆ.
7. ನಾನು ಸೈತಾನನೊಂದಿಗೆ ಹೋರಾಡುವಾಗ ಸತ್ಯವೇದವು ನನ್ನ ಸರ್ವಾಯುಧವಾಗಿದೆ.

# ನಮ್ಮ ದೇಶದ ಸುದ್ದಿಗಳು

## (INDIAN NEWS)

### 1. ಕೃಷಿ ಉತ್ಪನ್ನಗಳಿಗೆ ಇ–ಮಾರ್ಕೆಟಿಂಗ್ :

ಅಮೆಜಾನ್, ಫ್ಲಿಪ್‌ಕಾರ್ಟ್ ಮಾದರಿಯಲ್ಲೇ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಹೊಸ ಇ–ಮಾರ್ಕೆಟಿಂಗ್ ಪೋರ್ಟಲ್ ಜಾರಿಗೆ ತರಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಸದ್ಯದಲ್ಲೇ ಈ ಕುರಿತು ಮಾರ್ಗಸೂಚಿ ಜಾರಿಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.

### 2. ಆರೋಗ್ಯ ಸಮಸ್ಯೆಯಿಂದಾಗಿ ಆರ್ಥಿಕ ಸಂಕಷ್ಟ :

ಆರೋಗ್ಯ ಸಮಸ್ಯೆಯಿಂದಾಗಿ ದೇಶದಲ್ಲಿ 6.3 ಕೋಟಿ ಜನರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಅಲ್ಲದೇ ದೇಶದ ಎಲ್ಲಾ ವ್ಯಕ್ತಿಗಳಿಗೂ ಕೈಗೆಟುಕುವ ದರದಲ್ಲಿ ವೈದ್ಯಕೀಯ ಸೇವೆ ಒದಗಿಸಲು ಹೊಸ ನೀತಿ ರೂಪಿಸುವ ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದೆ.

### 3. ಕಪ್ಪುಹಣ ವಿವರ ಸಂಗ್ರಹಕ್ಕೆ ವಿದೇಶಗಳಲ್ಲಿ ಗುಪ್ತಚರ ವಿಭಾಗ :

ಕಪ್ಪುಗಣ ಹಾಗೂ ತೆರಿಗೆ ವಂಚನೆ ಪ್ರಕರಣಗಳ ವಿವರ ಸಂಗ್ರಹಿಸುವ ಸಲುವಾಗಿ ವಿದೇಶಗಳಲ್ಲಿ ಗುಪ್ತಚರ ವಿಭಾಗ ಆರಂಭಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ. ಶ್ರೀಲಂಕಾ, ಚೀನಾ, ಬಾಂಗ್ಲಾದೇಶ, ಥಾಯ್ಲೆಂಡ್ ಮತ್ತಿತರ ರಾಷ್ಟ್ರಗಳ 7 ಕಡೆಗಳಲ್ಲಿ ಕಸ್ಟಮ್ಸ್ ಓವರ್‌ಸೀಸ್ ಇಂಟೆಲಿಜೆನ್ಸ್ ನೆಟ್‌ವರ್ಕ್ (ಸಿಒಐಎನ್) ಸ್ಥಾಪಿಸುವ ಬಗ್ಗೆ ಈಗಾಗಲೇ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ.

### 4. ರಾಜ್ಯಗಳಲ್ಲೂ ಔಷಧ ದರ ನಿಯಂತ್ರಣ ಕೇಂದ್ರ :

ದೇಶದ ಎಲ್ಲ ರಾಜ್ಯಗಳಲ್ಲೂ ಔಷಧ ದರ ನಿಯಂತ್ರಣ ಕೇಂದ್ರ ಸ್ಥಾಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಕರ್ನಾಟಕ, ರಾಜಸ್ಥಾನ ಹಾಗೂ ಮಹಾರಾಷ್ಟ್ರಗಳಲ್ಲಿ ಔಷಧ ದರ ನಿಯಂತ್ರಣ ಕೇಂದ್ರ ಸ್ಥಾಪನೆ ಪ್ರಕ್ರಿಯೆ ಈಗಾಗಲೇ ಆರಂಭಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

### 5. ಪಾಕ್‌ಗೆ ಅಮೆರಿಕ ಸರ್ಟಿಫಿಕೇಟ್ : ಭಾರತ ಆಕ್ಷೇಪ

ಉಗ್ರ ನಿಗ್ರಹಕ್ಕೆ ಸಂಬಂಧಿಸಿದಂತೆ ಪಾಕ್ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದು ಅಮೆರಿಕ ಹೇಳಿರುವುದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಪಾಕ್ ಕ್ರಮಗಳನ್ನು ಅನುಮೋದಿಸಿ ನೂರಾರು ಕೋಟಿ ನೆರವು ನೀಡಲು ಮುಂದಾಗಿರುವ ಅಮೆರಿಕ ಧೋರಣೆಗೆ ಪ್ರತಿಕ್ರಿಯಿಸಿರುವ ಭಾರತ, "ಅಮೆರಿಕ ತೆರಿಗೆದಾರರ ಹಣವನ್ನು ಈ ಸರಕಾರ, ಪಾಕ್‌ಗೆ ಹೇಗೆ ನೀಡುತ್ತದೆ?" ಎಂದು ಪ್ರಶ್ನಿಸಿದೆ.





# ಹೊರ ದೇಶದ ಸುದ್ದಿಗಳು

## (FOREIGN NEWS)

### 1. ಮಕ್ಕಳ ಹತ್ಯೆ : ತಾಯಿ ಬಂಧನ

ತನ್ನ ಏಳು ಮಕ್ಕಳು ಮತ್ತು ಸೋದರ ಸಂಬಂಧಿಯ ಒಂದು ಮಗು ಸೇರಿದಂತೆ ಎಂಟು ಮಕ್ಕಳನ್ನು ಹತ್ಯೆ ಮಾಡಿದ ಆರೋಪದ ಮೇಲೆ 37 ವರ್ಷದ ತಾಯಿಯನ್ನು ಆಸ್ಟ್ರೇಲಿಯಾದ ಕ್ವೀನ್ಸ್‌ಲೆಂಡ್ ಉತ್ತರ ಭಾಗದ ಕೈರನ್ಸ್ ನಗರದಲ್ಲಿ ಬಂಧಿಸಲಾಗಿದೆ. ಕೈರನ್ಸ್‌ನ ಮುರ್ರೆ ರಸ್ತೆಯಲ್ಲಿರುವ ಮೆರ್ಸನ್ ವರ್ರಿಯಾ ಅವರ ಮನೆಯಲ್ಲಿ ಎಂಟು ಮಕ್ಕಳ ಶವಗಳು ಪತ್ತೆಯಾಗಿವೆ.

### 2. ಚೀನಾ : ಡಿಎಫ್–41 ಕ್ಷಿಪಣಿ ಪರೀಕ್ಷೆ

ಪ್ರಬಲವಾದ ಹತ್ತು ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಮಹತ್ವಾಕಾಂಕ್ಷೆಯ ಡಿಎಫ್–41 ಖಂಡಾಂತರ ಕ್ಷಿಪಣಿ ಪರೀಕ್ಷೆಯನ್ನು ಚೀನಾ ಇತ್ತೀಚೆಗೆ ನಡೆಸಿದೆ. 'ಪೀಪಲ್ಸ್ ಲಿಬರೇಷನ್ ಆರ್ಮಿ' ಡಿಸೆಂಬರ್ 13ರಂದು ಈ ಪರೀಕ್ಷೆ ನಡೆಸಿದೆ. '12 ಸಾವಿರ ಕಿಲೋಮೀಟರ್ ಕ್ರಮಿಸಬಲ್ಲ ಈ ಕ್ಷಿಪಣಿಯ ವ್ಯಾಪ್ತಿಗೆ ಅಮೆರಿಕ ಸಂಪೂರ್ಣವಾಗಿ ಬರಲಿದೆ' ಎಂದು ಅಮೆರಿಕದ 'ವಾಷಿಂಗ್ಟನ್ ಫ್ರೀ ಬೀಕನ್' ಮಾಧ್ಯಮ ಹೇಳಿದೆ.

### 3. ಅಮೆರಿಕ ಜತೆ ಸಂಬಂಧಕ್ಕೆ ಕ್ಯೂಬಾ ಅಸೆಂಬ್ಲಿ ಒಪ್ಪಿಗೆ :

ಬದ್ಧವೈರಿಗಳಾಗಿದ್ದ ಕ್ಯೂಬಾ ಮತ್ತು ಅಮೆರಿಕ ರಾಜರಾಂತ್ರಿಕ ಸಂಬಂಧಗಳನ್ನು ಪುನರ್ ಸ್ಥಾಪಿಸಿಕೊಳ್ಳಲು ದೃಢ ಹೆಜ್ಜೆ ಇರಿಸಿವೆ. ಅಮೆರಿಕದೊಂದಿಗಿನ ಸಂಬಂಧ ಸುಧಾರಿಸಲು ಕ್ಯೂಬಾ ಅಧ್ಯಕ್ಷ ರೌಲ್ ಕ್ಯಾಸ್ಟ್ರೊ ಅವರ ತೀರ್ಮಾನಕ್ಕೆ ರಾಷ್ಟ್ರೀಯ ಅಸೆಂಬ್ಲಿ ಒಪ್ಪಿಗೆ ನೀಡಿದೆ. ಐವತ್ತು ವರ್ಷಗಳ ನಂತರ ರಾಜತಾಂತ್ರಿಕ ಸಂಬಂಧಗಳನ್ನು ಹೊಂದುವ ಬಗ್ಗೆ ಎರಡೂ ದೇಶಗಳು ಈಗಾಗಲೇ ಅಧಿಕೃತ ಘೋಷಣೆಯನ್ನೂ ಮಾಡಿವೆ.

### 4. ಎಬೋಲಾ ಹೋರಾಟ ಟೈಮ್ ಪ್ರಶಸ್ತಿ :

ಎಬೋಲಾ ನಿಯಂತ್ರಣಕ್ಕೆ ಶ್ರಮಿಸಿದ ಲೆಕ್ಕವಿಲ್ಲದಷ್ಟು ವೈದ್ಯರು, ದಾದಿಯರು ಮತ್ತು ಕಾಳಜಿ ವಹಿಸಿದವರನ್ನು ಸಾಮೂಹಿಕವಾಗಿ ಟೈಮ್ ನಿಯತಕಾಲಿಕೆಯ 2014ರ 'ವರ್ಷದ ವ್ಯಕ್ತಿ' ಪ್ರಶಸ್ತಿಗೆ ಹೆಸರಿಸಲಾಗಿದೆ.

### 5. ಸಾಗರಗಳಲ್ಲಿ ಐದು ಲಕ್ಷ ಕೋಟಿ ಪ್ಲಾಸ್ಟಿಕ್ ತುಣುಕುಗಳು :

ಎರಡು ಲಕ್ಷದ ಎಪ್ಪತ್ತು ಸಾವಿರ ಟನ್ ತೂಕ ಹೊಂದಿದ ಸುಮಾರು ಐದು ಲಕ್ಷ ಕೋಟಿ ಪ್ಲಾಸ್ಟಿಕ್ ತುಣುಕುಗಳನ್ನು ಹಿಂದೂ ಮಹಾಸಾಗರ ಸೇರಿದಂತೆ ವಿಶ್ವದ ಸಾಗರಗಳಿಂದ ಸಂಗ್ರಹಿಸಲಾಗಿದೆ ಎಂದು ಅಧ್ಯಯನವೊಂದು ತಿಳಿಸಿದೆ.

## ಕರ್ತನ ಮೂರು ಉತ್ತರಗಳು!

ನಮ್ಮ ಪ್ರಾರ್ಥನೆಗಳಿಗೆ ಕರ್ತನು ಮೂರು ವಿಧವಾದ ಉತ್ತರಗಳನ್ನು ದಯಪಾಲಿಸುತ್ತಾನೆ : "ಇಲ್ಲ/ಕಾದಿರು/ಈಗಲೇ".

1. ಕರ್ತನು ನಮ್ಮ ಪ್ರಾರ್ಥನೆಗೆ ಇಲ್ಲವೆಂದು ಉತ್ತರಿಸಿದರೆ ಒಂದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

* ನಾವು ಕೇಳಿದ್ದನ್ನು ಕರ್ತನು ಇಲ್ಲವೆಂದರೂ, ಅದಕ್ಕೂ ಹೆಚ್ಚಾದ ಬೇರೊಂದನ್ನು ನಮಗಾಗಿ ಕೊಡುತ್ತಾನೆ ಎಂದು ಅರಿತುಕೊಳ್ಳಿರಿ.

2. ಕರ್ತನು ಕೆಲವು ಸಮಯಗಳಲ್ಲಿ "ಸ್ವಲ್ಪ ಕಾದಿರು" ಎಂದು ಉತ್ತರಿಸುವನು.

* ಕರ್ತನು ಯಾರಿಗೆ ಯಾವದನ್ನು ಯಾವಾಗ ಕೊಡಬೇಕೋ ಹಾಗೆಯೇ ಕೊಡುವನು. ಉತ್ತರ ತಡವಾಗುತ್ತಿದೆಯಾ? ಅದು ಆಶೀರ್ವಾದಕ್ಕೆ ಸಂಕೇತ.

3. ಕರ್ತನು ಕೆಲವು ಪ್ರಾರ್ಥನೆಗಳಿಗೆ "ತಕ್ಷಣವೇ" ಉತ್ತರಿಸುತ್ತಾನೆ.

* ಅವಶ್ಯವಾದ, ಅಗತ್ಯವಾದ, ಬೇಗನೆ ಆಗಬೇಕಾದ ಕಾರ್ಯಗಳಿಗೆ ಕರ್ತನು ಉತ್ತರ ದಯಪಾಲಿಸುವದರಲ್ಲಿ ತಡಮಾಡುವದಿಲ್ಲ.

ಹೌದು, ಕರ್ತನು ಎಲ್ಲಾ ಪ್ರಾರ್ಥನೆಗಳಿಗೂ, ಯಾವುದಾದರೊಂದು ಉತ್ತರವನ್ನು ಕೊಟ್ಟೇ ಕೊಡುವನು.

## ಹೇಗೆ ಪ್ರಾರ್ಥಿಸಬೇಕು?

1. ಎಚ್ಚರವಾಗಿದ್ದು ಪ್ರಾರ್ಥಿಸಿರಿ (ಮತ್ತಾ. 26:41).
2. ದೇವರ ಚಿತ್ತಕ್ಕೆ ಒಪ್ಪಿಸಿ ಪ್ರರ್ಥಿಸಬೇಕು (ಮತ್ತಾ. 26:42).
3. ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕು (ಲೂಕ. 18:1).
4. ಎಲ್ಲಾ ಕಾಲದಲ್ಲಿಯೂ ಪ್ರಾರ್ಥನೆ ಮಾಡಬೇಕು (ಲೂಕ. 21:36).
5. ಉಪವಾಸವಿದ್ದು (ಅಪೊ. 13:3) ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥಿಸಬೇಕು (ಎಫೆ. 6:18).
6. ಆಸಕ್ತಿಯಿಂದ (ಲೂಕ. 22:44) ಕೃತಜ್ಞತಾ ಸ್ತುತಿಯೊಂದಿಗೆ ಪ್ರಾರ್ಥಿಸಬೇಕು (ಫಿಲಿ. 4:6).
7. ನಂಬಿಕೆಯಿಂದಲೂ (ಮತ್ತಾ. 21:22) ಕಣ್ಣೀರಿನಿಂದಲೂ ಪ್ರಾರ್ಥಿಸಬೇಕು (ಇಬ್ರಿ. 5:7)



ಫೆಬ್ರವರಿ 1

## ಒಳ್ಳೆಯ ಮನಸ್ಸು!

ಬೆಳಿಗ್ಗೆ : ವಿಮೋ. 27, 28
ಸಂಜೆ : ಮತ್ತಾ 21:1–22

"ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ" (ಫಿಲಿ. 2:5).

ಕ್ರೈಸ್ತ ಜೀವಿತದಲ್ಲಿ ಉತ್ತಮವಾದ ಮನಸ್ಸು ಬಹಳ ಅಗತ್ಯವಾದದ್ದು. ಒಬ್ಬ ಮನುಷ್ಯನ ಚಿಂತನೆಗಳು ಹೇಗೋ, ಹಾಗೆಯೇ ಅವನ ಮಾತುಗಳು, ನಡವಳಿಕೆಗಳು ಇರುವದು. ಆ ಚಿಂತನೆಗಳೇ ಅವನು ಕ್ರಿಸ್ತೀಯ ಜೀವಿತದಲ್ಲಿ ಜಯಭರಿತವಾದ ಓಟವನ್ನು ಓಡಿ ಮುಗಿಸಲು ಸಾಧ್ಯ. ಅವನ ಚಿಂತನೆಗಳು ಪರಿಶುದ್ಧವಾಗಿಯೂ, ಪ್ರೀತಿಯಿಂದ ತುಂಬಿದ್ದಾಗಿಯೂ ಇರುವದಾದರೆ ಅವನು ನಿಶ್ಚಯವಾಗಿ ಒಳ್ಳೆಯ ಜೀವಿತವನ್ನು ನಡೆಸುವನು. ಆದರೆ ಕಪಟವಾದ ಸೋಲಿನ ಚಿಂತನೆಗಳುಳ್ಳವನಾದರೆ ಅವನ ಜೀವಿತ ವ್ಯರ್ಥವಾದ ಜೀವಿತವಾಗಿ ಕೊನೆಗೊಳ್ಳುವದು.

ಈ ಲೋಕದ ಜೀವಿತದಲ್ಲಿ ಒಳ್ಳೆಯ ಪರಿಪೂರ್ಣವಾದ ಚಿಂತನೆಗಳಿಂದ ಕೂಡಿದ ವ್ಯಕ್ತಿ ಇರುವನೆಂದರೆ, ಅದು ಕ್ರಿಸ್ತನೇ. ಆತನ ಮನಸ್ಸು ನಮಗೆಲ್ಲರಿಗೂ ಮಾದರಿಯಾಗಿರುವದು. ಅದು ನಾವೆಲ್ಲರೂ ಹಿಂಬಾಲಿಸುವಂಥದ್ದು. ನಮ್ಮ ಚಿಂತನೆಗಳಲ್ಲಿ ಜಯವನ್ನು ಬೋಧಿಸುವದಕ್ಕಾಗಿಯೇ ತಂದೆಯಾದ ದೇವರು ತನ್ನ ಮಗನನ್ನು ಭೂಮಿಗೆ ಕಳುಹಿಸಿದನು. ಆದ್ದರಿಂದಲೇ ಅಪೊ. ಪೌಲನು ಹೇಳುತ್ತಾನೆ "ಕ್ರಿಸ್ತಯೇಸುವಿನಲ್ಲಿದ್ದ ಮನಸ್ಸು ನಿಮ್ಮಲ್ಲಿಯೂ ಇರಲಿ" ಎಂದು (ಫಿಲಿ.2:5). ಆತನ ಚಿಂತನೆಗಳು ಸಕಲ ಮಾನವಕುಲ ಕೋಟಿಗೆ ಮಾರ್ಗದರ್ಶನ ನೀಡುವಂಥದ್ದು. ಕ್ರಿಸ್ತನ ಆಲೋಚನೆಗಳು, ಮನಸ್ಸು ಏನೆಂಬುದನ್ನು ಮತ್ತಾಯ, ಮಾರ್ಕ, ಲೂಕ, ಯೋಹಾನರು ಬರೆದ ಸುವಾರ್ತೆಗಳಲ್ಲಿ ನೀವು ಓದಿ ತಿಳಿದುಕೊಳ್ಳಬಹುದು. ಒಳ್ಳೆಯ ಮನಸ್ಸುಳ್ಳ ಕ್ರಿಸ್ತನಿಗೆ ಪರಲೋಕ ಕೊಟ್ಟ ಬಹುಮಾನವೇನು? "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು" (ಫಿಲಿ 2:9–11) ಎಂದು ಸತ್ಯವೇದ ಹೇಳುತ್ತದೆ. ಕ್ರಿಸ್ತಯೇಸುವಿನಲ್ಲಿರುವ ಮನಸ್ಸು ಲೌಕೀಕ ಜೀವಿತವನ್ನು ಮಾತ್ರವಲ್ಲ. ನಿತ್ಯತ್ವದ ಜೀವಿತವನ್ನೂ ಮಾರ್ಪಡಿಸುವದು.

ದೇವಜನರೇ, ನಿಮ್ಮ ಕ್ರಿಯೆಗಳನ್ನು ಮಾತ್ರವಲ್ಲ, ನಿಮ್ಮ ಚಿಂತನೆಗಳನ್ನೂ ದೇವರ ಸನ್ನಿಧಾನದಲ್ಲಿ ಪರೀಕ್ಷಿಸಿಕೊಳ್ಳಿರಿ. ನೀವು ಎಷ್ಟರ ಮಟ್ಟಿಗೆ ಸತ್ಯವೇದವನ್ನು ಓದಿ ಧ್ಯಾನಿಸುವಿರೋ ಅಷ್ಟರಮಟ್ಟಿಗೆ ನಿಮ್ಮ ಚಿಂತನೆಗಳು ನಿಮ್ಮಲ್ಲಿ ಬೆಳೆದು ಫಲಕೊಡಲಾರಂಭಿಸುವದು.

*ನೆನಪಿಗೆ : "ನನ್ನ ಶರಣನೇ ನನ್ನ ವಿಮೋಚಕನೇ, ನನ್ನ ಮಾತುಗಳೂ, ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ" (ಕೀರ್ತನೆ. 19:14).*

ಫೆಬ್ರವರಿ 2

## ನನಗಾದರೋ ಕ್ರಿಸ್ತನ ಮನಸ್ಸು!

ಬೆಳಿಗ್ಗೆ : ವಿಮೋ. 29, 30
ಸಂಜೆ : ಮತ್ತಾ 21:23–46

ಕರ್ತನ ಮನಸ್ಸನ್ನು ತಿಳುಕೊಂಡು ಆತನಿಗೆ ಉಪದೇಶಿಸುವವನಾರು? ಎಂದು ಬರೆದಿದೆಯಲ್ಲಾ; ನಮಗಾದರೋ ಕ್ರಿಸ್ತನ ಮನಸ್ಸು ದೊರಕಿತು (1 ಕೊರಿಂಥ 2:16).

ಅಪೊ. ಪೌಲನು "ನನಗಾದರೋ ಕ್ರಿಸ್ತನ ಮನಸ್ಸು ದೊರಕಿತು" ಎಂದು ಎಷ್ಟೊಂದು ದೃಢವಾಗಿ ಹೇಳುತ್ತಾನೆ. ಕ್ರಿಸ್ತನಲ್ಲಿದ್ದ ಮನಸ್ಸು ನಿಮ್ಮಲ್ಲಿಯೂ ಇರಲಿ ಎಂದು ಬರೆದ ಆತನು (ಫಿಲಿ. 2:5) ಕೊನೆಯಲ್ಲಿ ನನಗಾದರೋ ಕ್ರಿಸ್ತನ ಮನಸ್ಸು ದೊರಕಿತು ಎಂದು ಹೇಳುತ್ತಾನೆ. ಈ ಮಧ್ಯೆ ಎಷ್ಟು ವರುಷಗಳು ಅಭ್ಯಾಸ ಮಾಡಿರುವನೊ! ಯಾವ ರೀತಿಯಲ್ಲಿ ತನ್ನ ಚಿಂತನೆಗಳನ್ನು ನಿಗ್ರಹಿಸಿದ್ದನೋ! ಸತ್ಯವೇದ ವಾಕ್ಯಗಳ ಮೂಲಕವಾಗಿಯೂ, ಪ್ರಾರ್ಥನೆಯ ಮೂಲಕವಾಗಿಯೂ ಅರ್ಪಣೆಯ ಮೂಲಕವಾಗಿಯೂ ಒಬ್ಬ ಮನುಷ್ಯನ ಮನಸ್ಸು ಕ್ರಿಸ್ತಯೇಸುವಿನ ಮನಸ್ಸಿನಂತೆ ಮಾರ್ಪಡಲು ಸಾಧ್ಯ.

ಪ್ರಾರಂಭದಲ್ಲಿ ಅವನ ಮನಸ್ಸು ಹಾಗಿರಲಿಲ್ಲ. ಸ್ತೆಫನನು ಕಲ್ಲೆಸೆದು ಕೊಲ್ಲಲ್ಪಟ್ಟಿದ್ದಾಗ ಸೌಲನೆನಿಸಿಕೊಂಡಿದ್ದ ಪೌಲನು ಕಲ್ಲೆಸೆಯುವವರ ವಸ್ತ್ರಗಳನ್ನು ಕಾಯುತ್ತಿದ್ದನು. (ಅ.ಕೃ. 7:58). ಮಾತ್ರವಲ್ಲ, ಅವನಲ್ಲಿ ಮೃಗೀಯವಾದ ಮೊಂಡಾದ ಭಕ್ತಿ ವೈರಾಗ್ಯವಾದ ಮನಸ್ಸು ಅವನಲ್ಲಿತ್ತು. ಕರ್ತನ ಶಿಷ್ಯರ ಮೇಲೆ ರೌದ್ರವಾಗಿದ್ದು ಅವರನ್ನು ಬಂಧಿಸಿ ಎಳೆದುಕೊಂಡು ಹೋಗಿ ಕೊಲ್ಲಬೇಕೆಂದು ಮಹಾಯಾಜಕನ ಬಳಿ ಅಪ್ಪಣೆ ಪಡೆದುಕೊಂಡು ದಮಸ್ಕಕ್ಕೆ ಹೊರಟನು (ಅ.ಕೃ. 9:2). ಕ್ರಿಸ್ತನು ಅವನನ್ನು ಸಂಧಿಸಿದಾಗ ಅವನ ಮನಸ್ಸು ಮಾರ್ಪಟ್ಟಿತು. ತನ್ನ ಹಳೆಯ ಜೀವಿತವನ್ನು ಕುರಿತು ಅವನ ಮನಸ್ಸಾಕ್ಷಿ ಬಾಧಿಸಲ್ಪಟ್ಟಿತು. "ಪಾಪಿಗಳಲ್ಲಿ ನಾನೇ ಮುಖ್ಯನು" ಎಂದು ಅವನ ಆಂತರ್ಯ ಕೂಗಿ ಹೇಳಿತು (1 ತಿಮೊ. 1:15). ಅವನ ಮನಸ್ಸು ನೂತನವಾಯಿತು. ನಿಮ್ಮೊಳಗೆ ಇಂಥ ಮಾರ್ಪಟು ಅಗತ್ಯ. ಕ್ರಿಸ್ತನಂತೆ ಮಾರ್ಪಡಬೇಕೆಂಬ ಯೋಚನೆ, ಧ್ಯೇಯ ನಿಮ್ಮಲ್ಲಿರುವದಾದರೆ ನಿಶ್ಚಯವಾಗಿ ರೂಪಾಂತರಗೊಳ್ಳುವಿರಿ. ನನಗಾದರೋ ಕ್ರಿಸ್ತನ ಮನಸ್ಸು ಉಂಟಾಯಿತು ಎಂದು ಎದೆತಟ್ಟಿ ಹೇಳಲು ಸಾಧ್ಯ. ಪಾಪಿಗಳಿಗೆ ಲೌಕೀಕತೆಯುಳ್ಳವರಿಗೆ ಹೀಗೆ ಮಾರ್ಪಡಲು ಸಾಧ್ಯ.

ದೇವಜನರೇ, ಅಪೊ. ಪೌಲನ ಸಾಕ್ಷಿ ನಿಮ್ಮನ್ನು ಉತ್ಸಾಹಗೊಳಿಸಲಿ. ಕ್ರಿಸ್ತನ ಮನಸ್ಸನ್ನು ಹೊಂದಿಕೊಳ್ಳಲು ಎಡಬಿಡದೆ ಪ್ರಯತ್ನಿಸಿರಿ, ಹೋರಾಡಿ ಪ್ರಾರ್ಥಿಸಿರಿ.

*ನೆನಪಿಗೆ : "ನಮ್ಮಲ್ಲಿ ಪ್ರವೀಣರಾದವರು ಇದೇ ಅಭಿಪ್ರಾಯವುಳ್ಳವರಾಗಿರೋಣ. ಯಾವದಾದರೂ ಒಂದು ವಿಷಯದಲ್ಲಿ ನೀವು ಬೇರೆ ಅಭಿಪ್ರಾಯವುಳ್ಳವರಾಗಿದ್ದರೆ ಅದನ್ನೂ ದೇವರು ನಿಮಗೆ ತೋರಿಸಿಕೊಡುವನು" (ಫಿಲಿ. 3:15).*



ಫೆಬ್ರವರಿ 3

## ವ್ಯರ್ಥ ಆಲೋಚನೆಗಳು!

ಬೆಳಿಗ್ಗೆ : ವಿಮೋ 31,32,33
ಸಂಜೆ : ಮತ್ತಾ 22:1–15

"ಚಪಲಚಿತ್ತರನ್ನು ದ್ವೇಷಿಸುತ್ತೇನೆ; ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುತ್ತೇನೆ" (ಕೀರ್ತ.119:113).

ವ್ಯರ್ಥವಾದ ಆಲೋಚನೆಗಳನ್ನು ಮಾಡುವದರಿಂದ ಸಮಯವೂ ವ್ಯರ್ಥವಾಗುವದು, ಜೀವಿತವೂ ವ್ಯರ್ಥವಾಗುವದು. ದೇವರು ಕೊಟ್ಟ ಅಮೂಲ್ಯವಾದ ಕಾಲವನ್ನು ಪ್ರಯೋಜನಕಾರಿಯಾದ ಜೀವಿತವನ್ನು ರೂಪಿಸುವ ಆಲೋಚನೆಗೆ ಒಪ್ಪಿಸಿಕೊಟ್ಟರೆ ಎಷ್ಟೋ ಒಳ್ಳೆಯದು.

ಅನೇಕ ವೇಳೆ ಮನುಷ್ಯನು ಬೇಡದ ಆಲೋಚನೆಗಳಿಂದ ತನ್ನನ್ನು ತಾನೇ ಕೆಡಿಸಿಕೊಳ್ಳುವನು. ಕೆಲವರಿಗೆ ರಾತ್ರಿಯಲ್ಲಿ ನಿದ್ದೆ ಬರುವದಿಲ್ಲ. ಕಾರಣವಿಲ್ಲದ ಭಯ, ಕಳವಳಗಳಿಂದ ಒದ್ದಾಡುವರು. ಇದೆಲ್ಲದರ ಕಾರಣ ಬೇಡದ ಆಲೋಚನೆಗಳಲ್ಲಿ ಮುಳುಗುವದೇ ಆಗಿದೆ. ಇನ್ನು ಕೆಲವರು ತಮ್ಮ ಮನಸ್ಸಿನಲ್ಲಿಯೇ ಕಲ್ಪನೆಯ ಲೋಕವನ್ನು ಸೃಷ್ಟಿಸಿಕೊಂಡು ಭ್ರಮೆಯ ಲೋಕದಲ್ಲಿ ಜೀವಿಸುತ್ತಿರುತ್ತಾರೆ. ಅಂಥವರಿಗೆ ವಾಸ್ತವಿಕತೆಯ ಅರಿವಿಲ್ಲದೆ ತಮ್ಮ ಜೀವಿತದಲ್ಲಿ ಸೋಲನ್ನು ಅನುಭವಿಸುವರು. ಇನ್ನು ಕೆಲವರ ಮನಸ್ಸನ್ನು ಆಲೋಚನೆಗಳನ್ನು ಸೈತಾನನು ಉಪಯೋಗ ಪಡಿಸಿಕೊಳ್ಳುತ್ತಾನೆ. ಅಂಥವರ ಆಲೋಚನೆಗಳು ಯಾವಾಗಲೂ ದ್ವೇಷ, ಅಸೂಯೆ, ವಂಚನೆ ಇವುಗಳಿಂದಲೇ ತುಂಬಿರುತ್ತದೆ. ಶುದ್ಧವಾದ ಚಿಂತನೆ ಇಲ್ಲದೆ ಪರಿಶುದ್ಧವಾದ ಜೀವಿತವನ್ನು ಜೀವಿಸಲು ಸಾಧ್ಯವಿಲ್ಲ. ಬೇರು ಪರಿಶುದ್ಧವಾಗಿದ್ದರೆ ಮರವೂ ಪರಿಶುದ್ಧವಾಗಿರುವದು. ಹಾಗೆಯೇ ಒಬ್ಬ ಮನುಷ್ಯನ ಆಲೋಚನೆಗಳು, ಚಿಂತನೆಗಳು, ಪರಿಶುದ್ಧವಾಗಿರುವದಾದರೆ ಮಾತ್ರ ಅವನ ಜೀವಿತವೂ ಪರಿಶುದ್ಧವಾಗಿರುವದಕ್ಕೆ ಸಾಧ್ಯ. ಇದಕ್ಕೆ ಯೇಸುಕ್ರಿಸ್ತನೇ ನಮಗೆ ಮಾದರಿಯಾಗಿರುವನು. ಆತನು ಪರಿಶುದ್ಧನು, ಪಾಪವನ್ನು ಅರಿಯದಾತನು.

ದೇವಜನರೇ, ನಿಮ್ಮ ಚಿಂತನೆಗಳಲ್ಲಿ ಪರಿಶುದ್ಧತೆಯನ್ನು ಪಡೆದುಕೊಳ್ಳಿರಿ. ಕ್ರಿಸ್ತನ ಮನಸ್ಸು, ಚಿಂತನೆ, ನಿಮ್ಮೊಳಗೆ ಇರಲಿ. ನಾಲ್ಕು ಸುವಾರ್ತೆಗಳನ್ನು ಪುನಃ ಪುನಃ ಓದುವಾಗ, ಕ್ರಿಸ್ತನ ಚಿಂತನೆ, ಆಲೋಚನೆ ಏನು ಎಂಬುದನ್ನು ತಿಳಿದುಕೊಳ್ಳಬಹುದು. ಪ್ರಾರ್ಥನೆಯ ಮೂಲಕವೂ ಕ್ರಿಸ್ತನ ನಾಮದಲ್ಲಿ ನಿಮ್ಮ ಚಿಂತನೆಗಳನ್ನು ಶುದ್ಧೀಕರಿಸಿಕೊಳ್ಳಬಹುದು. ಸೋಲಿನ ಚಿಂತನೆಗಳನ್ನು ಮಾರ್ಪಡಿಸಿ ಗೆಲುವಿನ ಚಿಂತನೆಗಳನ್ನು ಹೊಂದಿಕೊಂಡು ಜಯದ ಓಟವನ್ನು ಓಡಿರಿ.

*ನೆನಪಿಗೆ : "ಮೂಢರೇ, ಜಾಣತನವನ್ನು ಕಲಿತುಕೊಳ್ಳಿರಿ, ಜ್ಞಾನಹೀನರೇ, ಬುದ್ಧಿಯನ್ನು ಗ್ರಹಿಸಿರಿ" (ಜ್ಞಾನೋಕ್ತಿ 8:5).*

ಫೆಬ್ರವರಿ **4**

## ಚಿಂತನೆಗಳನ್ನು ಪರಿಶುದ್ಧಪಡಿಸಲು!

ಬೆಳಿಗ್ಗೆ : ವಿಮೋ. 34, 35
ಸಂಜೆ : ಮತ್ತಾ 22:16–46

"ಗೊಲ್ಗೊಥಾ, ಅಂದರೆ ಕಪಾಲಸ್ಥಳ ಎಂಬ ಸ್ಥಾನಕ್ಕೆ ಬಂದಾಗ" (ಮತ್ತಾ. 27:33).

ಯೇಸುಕ್ರಿಸ್ತನು ಶಿಲುಬೆಯಲ್ಲಿ ಜಡಿಯಲ್ಪಡುವದಕ್ಕೆ ಪರಲೋಕವು ಒಂದು ಮುಖ್ಯವಾದ ಸ್ಥಳವನ್ನು ನೇಮಿಸಿತ್ತು. ಹೌದು ಆ ಸ್ಥಳವು "ಗೊಲ್ಗೊಥಾ" ಎಂದೂ, "ಕಪಾಲಸ್ಥಳ" ಎಂದೂ 'ಕಲ್ವಾರಿ' ಎಂದೂ ಕರೆಯಲ್ಪಡುತ್ತದೆ. ಕಪಾಲವೆಂದರೆ ತಲೆಬುರುಡೆ ಎಂದು ಅರ್ಥ.

ಮನುಷ್ಯನ ಪಾಪ, ಅಕ್ರಮ ಚಿಂತನೆಗಳಿಗೆ ಆ ಕಪಾಲವೆಂಬ ಬೆಟ್ಟದಲ್ಲಿ ಕರ್ತನು ಪರಿಹಾರವನ್ನು ನೀಡಿ, ಚಿಂತನೆಗಳನ್ನು ತೊಳೆದು ಪರಿಶುದ್ಧಪಡಿಸಲು ಬಯಸಿದನು. ಯೇಸುವಿನ ಇಡೀ ಶರೀರವು ಗಾಯಗೊಂಡು ರಕ್ತದಿಂದ ತೋಯ್ದು ಹೋಗಿದ್ದರೂ ಆತನನ್ನು ಹೆಚ್ಚಾಗಿ ಘಾಸಿಗೊಳಿಸಿದ್ದು ಆತನ ತಲೆಯಲ್ಲಿ ಉಂಟಾದ ಗಾಯಗಳು. ಚರಿತ್ರೆಕಾರರು ಹೇಳುವ ಪ್ರಕಾರ ಆತನನ್ನು ಹಿಂಸೆಗೆ ಗುರಿಪಡಿಸಿದಾಗ ಆತನ ಸುತ್ತಲೂ 600 ಮಂದಿ ಸೈನಿಕರು ಇದ್ದರು. ವಿಷಪೂರಿತವಾದ ಮುಳ್ಳುಬಳ್ಳಿಯಿಂದ ಹೆಣೆಯಲ್ಪಟ್ಟ ಕಿರೀಟವನ್ನು ಆತನ ಶಿರಸ್ಸಿನ ಮೇಲೆ ಇಟ್ಟು ಬಲವಾದ ದೊಣ್ಣೆಗಳಿಂದ ಆತನ ತಲೆಯ ಮೇಲೆ ಹೊಡೆದರು. ಆ ಪೆಟ್ಟುಗಳು ಎಷ್ಟು ಬಲವಾಗಿತ್ತೆಂದರೆ ಕಿರೀಟದಲ್ಲಿದ್ದ ಮುಳ್ಳುಗಳು ತಲೆಯನ್ನು ತೂರಿ, ಕಣ್ಣುಗಳಿಂದ ಹೊರಗೆ ಬಂದಿದ್ದವೆಂದು ಬರೆಯುತ್ತಾರೆ. ಆತನ ತಲೆ ಒಡೆದು ರಕ್ತ ಚೆಲ್ಲಿತ್ತು. ಇಷ್ಟೆಲ್ಲಾ ಬಾಧೆಗಳನ್ನು ದಂಡನೆಯನ್ನು ಯಾರಿಗಾಗಿ ಅನುಭವಿಸಿದನು? ನಮ್ಮ ಒಬ್ಬೊಬ್ಬರ ಪಾಪ, ಅಕ್ರಮಗಳ ಚಿಂತನೆಯನ್ನು ತೊಳೆದು ಪರಿಶುದ್ಧಪಡಿಸುವದಕ್ಕಾಗಿಯೇ ಆತನು ಅನುಭವಿಸಬೇಕಾಯಿತು.

ದೇವಜನರೇ, ಇನ್ನೂ ನಿಮ್ಮ ಚಿಂತನೆಗಳು ಆಲೋಚನೆಗಳನ್ನು ಹುಚ್ಚು ಕುದುರೆಯಂತೆ ಓಡಲು ಬಿಡಬೇಡಿ,. ನಿಮ್ಮ ಚಿಂತನೆಗಳನ್ನು, ಆಲೋಚನೆಗಳನ್ನು ಕರ್ತನ ಕೈಗಳಲ್ಲಿ ಒಪ್ಪಿಸಿಕೊಟ್ಟು ದೇವರೇ, ನನ್ನ ಚಿಂತನೆಗಳನ್ನು ಪರಿಶುದ್ಧಪಡಿಸಲು, ನಿನ್ನ ಚಿಂತನೆಗಳಾಗಿ ಮಾರ್ಪಡಿಸಲು ನಿನ್ನನ್ನೇ ಒಪ್ಪಿಸಿಕೊಟ್ಟೆಯಲ್ಲಾ, ನನ್ನ ಚಿಂತನೆಗಳು ನಿನ್ನ ಚಿಂತನೆಗಳಾಗಿ ಮಾರ್ಪಡಿಸು ತಂದೆಯೇ ಎಂದು ಪ್ರಲಾಪಿಸಿ ಪ್ರಾರ್ಥಿಸಿರಿ.

*ನೆನಪಿಗೆ : "ಕ್ರಿಸ್ತನು ಶರೀರದಲ್ಲಿ ಬಾಧೆಪಟ್ಟದ್ದರಿಂದ ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ" (1 ಪೇತ್ರ. 4:1).*



ಫೆಬ್ರವರಿ **5**

## ಶಿರಸ್ಸಿಗೆ ಅಭಿಷೇಕ!

ಬೆಳಿಗ್ಗೆ : ವಿಮೋ. 36,37,38
ಸಂಜೆ : ಮತ್ತಾ 23:1–22

"ಒಬ್ಬ ಸ್ತ್ರೀಯು ಬಹುಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲದ ಭರಣಿಯನ್ನು ತೆಗೆದುಕೊಂಡು ಬಂದು ಆ ಭರಣಿಯನ್ನು ಒಡೆದು ತೈಲವನ್ನು ಆತನ ತಲೆಯ ಮೇಲೆ ಹೊಯಿದಳು" (ಮಾರ್ಕ.14:3).

ಮನುಷ್ಯನ ಚಿಂತನೆಗಳು, ಯೋಚನೆಗಳು, ಅವನ ತಲೆಯಿಂದಲೇ ಹೊರಡುವದು. ಆದ್ದರಿಂದ ಚಿಂತನೆಗಳನ್ನು ಪರಿಶುದ್ಧಪಡಿಸಲು ಕ್ರಿಸ್ತನ ತಲೆಯು ಮುಳ್ಳಿನ ಕಿರೀಟವನ್ನು ಧರಿಸಬೇಕಾಯಿತು. ಕೋಲಿನ ಭಯಂಕರವಾದ ಪೆಟ್ಟುಗಳನ್ನು ಸಹಿಸಬೇಕಾಯಿತು. ಗೊಲ್ಗೊಥಾ ಬೆಟ್ಟದಲ್ಲಿ ಶಿಲುಬೆಯಲ್ಲಿ ಆತನ ದೇಹ ಜಜ್ಜಲ್ಪಡಬೇಕಾಯಿತು.

ಆ ಶ್ರಮೆಯನ್ನು ಯೇಸುಕ್ರಿಸ್ತನು ತಾಳಿಕೊಳ್ಳುವ ಉನ್ನತವಾದ ಬಲ ಹೊಂದಿಕೊಳ್ಳಲು ಅಭಿಷೇಕಿಸಲ್ಪಡಬೇಕಾಗಿತ್ತು. ಬೆಥಾನ್ಯದಲ್ಲಿದ್ದ ಲಾಜ಼ರನ ಸಹೋದರಿಯಾದ ಮರಿಯಳು ಯೇಸುಕ್ರಿಸ್ತನ ಪಾದಗಳಿಗೆ ಪರಿಮಳ ತೈಲವನ್ನು ಹಚ್ಚಿ ತನ್ನ ತಲೆಯ ಕೂದಲಿನಿಂದ ಆತನ ಪಾದಗಳನ್ನು ಒರೆಸಿದಳು ಎಂದು ಯೋಹಾನ 11:2ರಲ್ಲಿ ಕಾಣುತ್ತೇವೆ. ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು (ಅ.ಕೃ. 10:38). ಆದರೆ ಈಗ ಇನ್ನೊಂದು ಅಭಿಷೇಕ, ಯೇಸುವಿನ ಪಾದಗಳಿಗೆ ಅಲ್ಲ ಶಿರಸ್ಸಿಗೆ ಕೊಡಲ್ಪಟ್ಟಿತು. ಆತನು ಬೆಥಾನ್ಯದಲ್ಲಿ ಕುಷ್ಟರೋಗಿಯ ಮನೆಯಲ್ಲಿದ್ದಾಗ, ಲಾಜ಼ರನ ಸಹೋದರಿ ಮರಿಯಳು, ಪರಿಮಳ ತೈಲದ ಭರಣಿಯನ್ನು ಒಡೆದು ಆತನ ಶಿರಸ್ಸಿನ ಮೇಲೆ ಹೊಯ್ದಳು (ಮಾರ್ಕ. 14:3). ಯೇಸುವಿನ ಶಿರಸ್ಸಿನಲ್ಲಿ ಮುಳ್ಳಿನ ಕಿರೀಟ ಧಾರಣೆ ಮಾಡುವಾಗ, ಕೋಲಿನಿಂದ ಹೊಡೆಯುವಾಗ, ಶಿಲುಬೆಯಲ್ಲಿ ಅಣುಅಣುವಾಗಿ ತನ್ನ ಪ್ರಾಣವನ್ನು ಕೊಡುವಾಗ ಶ್ರಮೆಯನ್ನು ಸಹಿಸಿಕೊಳ್ಳುವಂಥ ಬಲವನ್ನು ಅಭಿಷೇಕ ನೀಡಿತು. ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡನು (ಇಬ್ರಿ. 9:14). ಪವಿತ್ರಾತ್ಮ ಬಲದಿಂದಲ್ಲದೆ, ಶಿಲುಬೆಯ ಮರಣವನ್ನು ಸಹಿಸಿಕೊಳ್ಳಲು ಯಾರಿಂದಲೂ ಸಾಧ್ಯವಾಗದು.

ದೇವಜನರೇ, ನಿಮ್ಮ ಶಿರಸ್ಸಿಗೆ ಅಭಿಷೇಕ ಅಗತ್ಯ. ನಿಮ್ಮ ಚಿಂತನೆಗಳನ್ನು ಅಭಿಷೇಕ ಕಾಪಾಡುವದು. ಇದು ನಿಮಗೆ ಕ್ರಿಸ್ತನ ರಕ್ತದಿಂದ ದೊರೆಯುವದು. ಆದ್ದರಿಂದ ನಿಮ್ಮ ಚಿಂತನೆಗಳಲ್ಲಿ ಕರ್ತನ ರಕ್ತವನ್ನು ಪವಿತ್ರಾತ್ಮನ ಅಭಿಷೇಕವನ್ನು ತನ್ನಿರಿ, ಆಗ ಸೈತಾನನು ಬೀಸುವ ಯಾವ ಅಸ್ತ್ರಗಳೂ ನಿಮ್ಮ ತಲೆಯ ಒಳಗೆ ನುಸುಳಲು ಆಗದು. ಚಿಂತನೆಗಳಲ್ಲಿ ಜಯಗಳಿಸುವಿರಿ.

*ನೆನಪಿಗೆ : "ಆತನ ಸ್ವಹಸ್ತವೇ, ಆತನಿಗೆ ರಕ್ಷಣ ಸಾಧನವಾಯಿತು. ಆತನ ಧರ್ಮವೇ ಆತನಿಗೆ ಆಧಾರವಾಯಿತು" (ಯೆಶಾ. 59:16,17).*

ಫೆಬ್ರವರಿ 6

## ಎಡಬಿಡದೆ ಸ್ತುತಿಸಿರಿ!

ಬೆಳಿಗ್ಗೆ : ವಿಮೋ. 39, 40
ಸಂಜೆ : ಮತ್ತಾ 23:23–39

"ನಾನು ಯೆಹೋವನನ್ನು ಎಡಬಿಡದೆ ಕೊಂಡಾಡುವೆನು. ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು" (ಕೀರ್ತ. 34:1).

ನಿಮ್ಮೊಂದಿಗಿರುವವರು ನಿಮ್ಮನ್ನು ಬಿಟ್ಟು ಅಗಲುವಾಗ, ನಿಮ್ಮ ಮೇಲೆ ಇಲ್ಲಸಲ್ಲದ ದೂರುಗಳನ್ನು ಹೇಳಿ, ಎಲ್ಲಾ ಆಪಾದನೆಗಳನ್ನು ನಿಮ್ಮ ತಲೆಯ ಮೇಲೆ ಹೊರಿಸಿ, ತಾವೂ ಏನೂ ಅರಿಯದವರಂತೆ ಹೊರಟುಹೋಗುವರು.

ಒಬ್ಬ ವಯಸ್ಸಾದ ಹಿರಿಯ ಬೋಧಕರು ತಮ್ಮ ಸಹಾಯಕ ಬೋಧಕರಿಂದ ಹೊರಿಸಲ್ಪಟ್ಟ ಸುಳ್ಳಾದ ಆಪಾದನೆಗಳ ನಿಮಿತ್ತ ಬಹಳವಾಗಿ ವ್ಯಥೆಗೊಂಡಿದ್ದರು. ಆ ಸಮಯದಲ್ಲಿ ಪವಿತ್ರಾತ್ಮನು ಆ ಬೋಧಕರೊಂದಿಗೆ "ನೀನು ಗಟ್ಟಿಯಾಗಿ ಕರ್ತನನ್ನು ಸ್ತುತಿಸು" ಎಂದು ಹೇಳಿದನು. ಆಗ ಆ ಬೋಧಕರು ಬಾಯಿ ತೆರೆದು ಗಟ್ಟಿಯಾಗಿ ಕರ್ತನನ್ನು ಸ್ತುತಿಸಲಾರಂಭಿಸಿದರು. ಅರ್ಧ ಗಂಟೆ ಹಾಗೆ ಸ್ತುತಿಸುವಷ್ಟರಲ್ಲಿ ಆತನ ಆಂತರ್ಯದಲ್ಲಿ ಒಂದು ದೈವೀಕ ಸಮಾಧಾನ ಉಂಟಾಗಿ ಸ್ತೋತ್ರವನ್ನು ನಿಲ್ಲಿಸಿ ಅವರಿಗೆ ಆಸಕ್ತಿಯಿಂದ ಪ್ರಾರ್ಥಿಸಲು ಸಾಧ್ಯವಾಯಿತು. ಯಾವ ಸಮಯದಲ್ಲಿ ದಾವೀದನು 34ನೇ ಕೀರ್ತನೆಯನ್ನು ಬರೆದನು ಎಂಬುದನ್ನು ಓದಿ ನೋಡಿರಿ. ಒಂದು ಕಡೆ ಇಸ್ರಾಯೇಲ್ಯರ ಅರಸನಾದ ಸೌಲನು, ಅವನನ್ನು ಬೇಟೆಗಾರನಂತೆ ಕಾಡು ಮೇಡುಗಳಲ್ಲಿ, ಗುಹೆಗಳಲ್ಲಿ ಹುಡುಕಿ ಅಟ್ಟಿಸಿಕೊಂಡು ಬರುತ್ತಿದ್ದನು. ಅವನ ಹೆಂಡತಿಯಾದ ಮೀಕಲಳು ಇನ್ನೊಬ್ಬನಿಗೆ ಹೆಂಡತಿಯಾಗಿ ಕೊಡಲ್ಪಟ್ಟಿದ್ದಳು. ಆ ಪರಿಸ್ಥಿತಿಯಲ್ಲಿ ರಾಜನಾದ ಅಹಿಮೆಲೇಕನ ಮುಂದೆ ದಾವೀದನು ನಿಲ್ಲಿಸಲ್ಪಟ್ಟಿದ್ದನು. ಆಗ ತನ್ನನ್ನು ಕಾಪಾಡಿಕೊಳ್ಳಲು ಅವನು ಬಾಯಲ್ಲಿ ಜೊಲ್ಲು ಸುರಿಸುತ್ತಾ ಹುಚ್ಚನಂತೆ ನಟಿಸಿದನು. ಇದರಿಂದ ಅವನು ತಲೆತಪ್ಪಿಸಿಕೊಳ್ಳಲಾಯಿತು. ಆ ಎಲ್ಲಾ ಕಳವಳ ಚಿಂತೆಗಳ ನಡುವೆ ಕರ್ತನನ್ನು ಎಡಬಿಡದೆ ಸ್ತುತಿಸುವೆನು. ಆತನ ಸ್ತೋತ್ರ ಯಾವಾಗಲೂ ನನ್ನ ಬಾಯಲ್ಲಿರುವದು ಎಂದು ಹೇಳುತ್ತಾನೆ.

ದೇವಜನರೇ, ನಿಮ್ಮ ಕಷ್ಟ ಚಿಂತನೆ, ಕಳವಳಗಳ ಸಮಯದಲ್ಲಿ ದೇವರನ್ನು ಗಟ್ಟಿಯಾಗಿ ಎಡಬಿಡದೆ ಸ್ತುತಿಸಲಾರಂಭಿಸಿರಿ. ಆಗ ಕರ್ತನ ಸಮಾಧಾನ, ನಿಮ್ಮ ಆಂತರ್ಯವನ್ನು ತುಂಬುವದು. ಕರ್ತನಿಂದ ಪರಿಹಾರ ಮಾರ್ಗವೂ ಪ್ರಕಟವಾಗುವದು.

*ನೆನಪಿಗೆ : "ದೇವಜನರೇ, ದೇವರಿಗೆ ಭಯಪಡುವ ಹಿರಿಕಿರಿಯರೇ, ನಮ್ಮ ದೇವರನ್ನು ಕೊಂಡಾಡಿರಿ" (ಪ್ರಕ. 19:5).*



ಫೆಬ್ರವರಿ 7

## ಸೆರೆಹಿಡಿಯಿರಿ!

ಬೆಳಿಗ್ಗೆ : ಯಾಜಕ. 1, 2, 3
ಸಂಜೆ : ಮತ್ತಾ 24:1–28

"ನಾವು ವಿತರ್ಕಗಳನ್ನೂ, ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲುಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯುವದಕ್ಕೆ ಸಿದ್ಧರಾಗಿದ್ದೇವೆ" (2 ಕೊರಿಂ. 10:5).

ಮನಸ್ಸು ಎಂಬುದು ಕರ್ತನು ಮಾನವಕುಲಕ್ಕೆ ಕೊಟ್ಟಿರುವ ಬಹುದೊಡ್ಡ ಆಶೀರ್ವಾದವಾಗಿರುವದು. ಮನುಷ್ಯನೋ, ತನಗೆ ಅನೇಕ ಉಪಾಯ ತಂತ್ರಗಳನ್ನು ಆರಿಸಿಕೊಂಡು ತನ್ನ ಆಲೋಚನೆಗಳಿಂದ ತನ್ನ ಜೀವಿತವನ್ನು ವ್ಯರ್ಥಪಡಿಸಿಕೊಳ್ಳುತ್ತಾನೆ. ಸೈತಾನನೂ ಮನುಷ್ಯನ ಮನಸ್ಸನ್ನು ಆಕ್ರಮಿಸಿಕೊಂಡು ಅವನನ್ನು ದಾಸನನ್ನಾಗಿಸಿಕೊಂಡು ಅವನ ಮೇಲೆ ಆಳ್ವಿಕೆ ನಡೆಸುವನು.

ದೇವಮಕ್ಕಳೇ, ಕೆಟ್ಟ ಯೋಚನೆಗಳನ್ನು ಸೆರೆಹಿಡಿಯುವದನ್ನು ಅರಿತಿರಬೇಕು. ತಮ್ಮನ್ನು ಕ್ರಮಪಡಿಸಿಕೊಂಡು ಸರಿಯಾದ ಮಾರ್ಗದಲ್ಲಿ ನಡೆಯುವದನ್ನು ತಿಳಿದಿರಬೇಕು. ಚಿಂತನೆ, ಯೋಚನೆಗಳಲ್ಲಿ ಪಡೆಯುವ ಜಯವೇ, ಜೀವನದಲ್ಲಿ ಜಯವಾಗಿದೆ. "ನಿನ್ನ ತಲೆಯ ಮೇಲೆ ಸಾವಿರಾರು ಹಕ್ಕಿಗಳು ಹಾರಬಹುದು. ಆದರೆ ಅವು ನಿನ್ನ ತಲೆಯಲ್ಲಿ ಗೂಡು ಕಟ್ಟಲು ಅನುಮತಿಸಬೇಡ" ಎಂಬುದು ನಾಣ್ಣುಡಿ. ಅನೇಕ ದುಷ್ಟ ಆಲೋಚನೆಗಳನ್ನು ಸೈತಾನನು ನಿಮ್ಮ ಮನಸ್ಸಿನಲ್ಲಿ ಹಾದುಹೋಗುವಂತೆ ಮಾಡಬಹುದು. ನೀವು ಒಮ್ಮೆ ಆಲೋಚನೆಗಳು ನಿಮ್ಮ ಆಂತರ್ಯವನ್ನು ಪ್ರವೇಶಿಸುವಂತೆ ಅನುಮತಿಸಿದರೆ ಅದು ಬೆಳೆದು ಹೆಮ್ಮರವಾಗಿ ನಿಮ್ಮ ಜೀವಿತವನ್ನೇ ನರಕವನ್ನಾಗಿ ಮಾಡಿಬಿಡುವದು. ಒಬ್ಬ ಯೌವನಸ್ಥನು ನನಗೆ ಗೊತ್ತು. ಅವನಿಗೆ ಸಿನಿಮಾ ನೋಡುವ ಹುಚ್ಚು. ಇದರಿಂದಾಗಿ ಇಚ್ಛೆಯ ಆತ್ಮ ಅವನೊಳಗೆ ಹೊಕ್ಕಿತು. ಒಬ್ಬ ನಟಿಯ ಕುರಿತಾಗಿ ಸದಾ ಕನಸು ಕಾಣತೊಡಗಿದನು. ಕನಸಿನ ಲೋಕದಲ್ಲಿ ಅವಳೊಂದಿಗೆ ವಿಹರಿಸಲಾರಂಭಿಸಿದನು. ಕೊನೆಗೆ ಮದುವೆಯಾದರೂ ಅವನಿಂದ ಆ ಕಲ್ಪನಾಲೋಕ ಬಿಟ್ಟು ಹೊರಬರಲಾಗದೆ, ತನ್ನ ಸಂಸಾರ ಜೀವಿತವನ್ನು ಹಾಳು ಮಾಡಿಕೊಂಡನು.

ದೇವಜನರೇ, ಅನೇಕರು ಈ ರೀತಿ ಹಲವು ಇಚ್ಛೆಗಳಿಗೆ ಸ್ಥಳಕೊಟ್ಟು ತಮ್ಮ ಜೀವಿತಗಳನ್ನು ಹಾಳುಮಾಡಿಕೊಳ್ಳುವರು. ಕುದುರೆಗೆ ಕಡಿವಾಣ ಹಾಕಿದಂತೆ ನಿಮ್ಮ ಆಲೋಚನೆಗಳಿಗೆ ದೇವರ ವಾಕ್ಯವೆಂಬ ಕಡಿವಾಣ ಹಾಕಿ, ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಂಡು ನಿತ್ಯಜೀವವೆಂಬ ಮಾರ್ಗದಲ್ಲಿ ಓಡಿರಿ.

*ನೆನಪಿಗೆ : ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ, ಅದರೊಳಗಿಂದ ಜೀವಧಾರೆಗಳು ಹೊರಡುವವು (ಜ್ಞಾನೋ. 4:23).*

ಫೆಬ್ರವರಿ 8

# ಮನಸ್ಸಿನ ಆಯುಧ!

ಬೆಳಿಗ್ಗೆ : ಯಾಜಕ. 4, 5
ಸಂಜೆ : ಮತ್ತಾ 24:29–51

"ನೀವು ಸಹ ಆತನಿಗಿದ್ದ ಭಾವವನ್ನೇ ಹಿಡಿದುಕೊಳ್ಳಿರಿ" (1 ಪೇತ್ರ. 4:1).

ನಮ್ಮ ಮನಸ್ಸು ಒಂದು ಯುದ್ಧರಂಗ. ನಿಮಗೆ ತಿಳಿದೋ ತಿಳಿಯದೆಯೋ ನಿಮ್ಮ ಮನಸ್ಸಿನಲ್ಲಿ ಒಂದು ರೀತಿಯ ಹೋರಾಟ ನಡೆಯುತ್ತಲೇ ಇರುತ್ತದೆ. ಪ್ರಪಂಚ, ಶರೀರ, ಸೈತಾನ, ನಿಮ್ಮ ಮನಸ್ಸಿನೊಂದಿಗೆ ಹೋರಾಡುವದು. ಅದನ್ನು ಎದುರಿಸಿ ನೀವು ಜಯ ತೆಗೆದುಕೊಳ್ಳದಿದ್ದರೆ, ಜೀವಿತ ವ್ಯರ್ಥವಾಗಿಹೋಗುವದು.

ಕೆಲವು ವರ್ಷಗಳ ಹಿಂದೆ ಇರಾಕಿಗೂ ಅಮೇರಿಕಾಗೂ ಯುದ್ಧ ನಡೆಯಿತು. ಆದರೆ ಆ ಯುದ್ಧ ಇರಾಕಲ್ಲೋ, ಅಮೆರಿಕಾದಲ್ಲೋ ನಡೆಯಲಿಲ್ಲ. ಕುವೆತ್ ದೇಶದಲ್ಲಿ ನಡೆಯಿತು. ಅದರಂತೆಯೇ, ಸೈತಾನನಿಗೂ, ದೇವರಿಗೂ ನಡುವೆ ವೈರತ್ವ ಸಾವಿರಾರು ವರ್ಷಗಳಿಂದ ಇದ್ದರೂ ಈ ಯುದ್ಧ ಪರಲೋಕದಲ್ಲಿಯಾಗಲಿ, ಪಾತಾಳದಲ್ಲಿಯಾಗಲಿ ನಡೆಯದೆ ವಿಶ್ವಾಸಿಗಳ ಮನಸ್ಸಿನೊಳಗೆ ನಡೆಯುತ್ತಿರುವದು. ನಿಮ್ಮ ಆಂತರ್ಯ ಒಂದು ಯುದ್ಧರಂಗವಾಗಿರುವದು. ಯಾವ ಯುದ್ಧವಾದರೂ ಸರಿ, ಗೆಲುವು ಸಾಧಿಸಲು ಯುದ್ಧಾಯುಧಗಳು ಅಗತ್ಯ. ಈ ಯುದ್ಧಾಯುಧಗಳೊಂದಿಗೆ ಕರ್ತನನ್ನು ಆಶ್ರಯಿಸಿ ನಿಂತು ಸೈತಾನನಿಗೆ ವಿರೋಧವಾಗಿ ಯುದ್ಧಮಾಡುವಾಗ ಗೆಲುವನ್ನು ಸಾಧಿಸುವಿರಿ. "ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ" (2 ಕೊರಿಂ. 10:4) ಎಂದು ಸತ್ಯವೇದ ಹೇಳುತ್ತದೆ. ಕರ್ತನು ಕೊಟ್ಟಿರುವ ಯುದ್ಧಾಯುಧಗಳಲ್ಲಿ ಒಂದು ಕರ್ತನಿಗೆ ಸಲ್ಲಿಸುವ ಸ್ತುತಿ. ಆ ಸ್ತುತಿ ನಿಮ್ಮೊಳಗೆ ದೇವಬಲವನ್ನು ತರುವದು. ಮನಸ್ಸಿನಲ್ಲಿ ಹೋರಾಟಗಳು ಬರುವಂಥ ಸಮಯಗಳಲ್ಲಿ ನೀವು ಕರ್ತನನ್ನು ಸ್ತುತಿಸಲಾರಂಭಿಸುವಾಗ ವಿರೋಧಿಗಳನ್ನು ನಿಮ್ಮ ಕಾಲಕೆಳಗೆ ಹಾಕುವನು. ಅದು ಹೆಮ್ಮೆಯ ಆಲೋಚನೆಗಳಾದರೂ ಸರಿ, ಲೌಕೀಕ ಯೋಚನೆಗಳಾದರೂ ಸರಿ, ಇಚ್ಛೆಯ ಯೋಚನೆಗಳಾದರೂ ಸರಿ, ನೀವು ಕರ್ತನನ್ನು ಸ್ತುತಿಸುತ್ತಾ ಅವು ನಿಮ್ಮ ಕಾಲಕೆಳಗೆ ಅಡಗಿಹೋಗುವವು.

ದೇವಜನರೇ, ನಿಮ್ಮ ಕಣ್ಣಮುಂದೆ ಕರ್ತನನ್ನು ತನ್ನಿರಿ, ಆತನ ಶಾಂತಗುಣವನ್ನು, ಸಹನೆಯನ್ನು ಧರಿಸಿ ಸ್ತುತಿಸಲಾರಂಭಿಸಿರಿ. ಬಾಯಿ ತೆರೆದು ಗಟ್ಟಿಯಾಗಿ ಸ್ತುತಿಸಿರಿ. ಅದು ನಿಮ್ಮ ಮನಸ್ಸಿನಲ್ಲಿ ಹೊಕ್ಕು ಮನಸ್ಸಮಾಧಾನ ನೀಡುವದು.

*ನೆನಪಿಗೆ : "ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು" (ಫಿಲಿ. 4:7).*



ಫೆಬ್ರವರಿ 9

# ರಕ್ಷಣೆಯ ಮನಸ್ಸು!

ಬೆಳಿಗ್ಗೆ : ಯಾಜಕ. 6, 7
ಸಂಜೆ : ಮತ್ತಾ 25:1–30

"ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ" (ಎಫೆ. 6:17).

ಮನಸ್ಸು ಅಲ್ಲಕಲ್ಲೋಲಗೊಳ್ಳುವ ಸ್ಥಳ ಶಿರಸ್ಸಾಗಿದೆ. ಮನಸ್ಸಿನ ಮೇಲೆ ಜಯವನ್ನು ನೀಡುವದಕ್ಕಾಗಿಯೇ ಯೇಸುಕ್ರಿಸ್ತನು ತನ್ನ ಶಿರಸ್ಸಿನಲ್ಲಿ ಮುಳ್ಳಿನ ಕಿರೀಟವನ್ನು ಧರಿಸಿ ಕಪಾಲವೆಂಬ ಸ್ಥಳದಲ್ಲಿ ತನ್ನ ಪ್ರಾಣವನ್ನು ಕೊಟ್ಟನು. ಶಿರಸ್ಸನ್ನು ಕಾಪಾಡಿಕೊಳ್ಳುವದು ನಿಮ್ಮ ಕರ್ತವ್ಯ. ಸೈತಾನನು ಹೂಡುವ ಬಾಣಗಳು ನಿಮ್ಮ ಶಿರಗಳನ್ನು ಹೋಗದಂತೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿರಿ.

ರಕ್ಷಣೆಯೆಂಬ ಶಿರಸ್ತ್ರಾಣವೆಂದರೇನು? ಯೇಸುಕ್ರಿಸ್ತನು ನನ್ನ ಪಾಪಗಳನ್ನೆಲ್ಲಾ ಮನ್ನಿಸಿ, ನನ್ನನ್ನು ರಕ್ಷಿಸಿರುವನು. ನನ್ನ ಹೆಸರನ್ನು ಜೀವಬಾಧ್ಯರ ಪುಸ್ತಕದಲ್ಲಿ ಬರೆದಿರುವನು. ಆತನು ನನ್ನನ್ನು ರಕ್ಷಿಸಿರುವದರಿಂದ, ನಾನು ಕರ್ತನ ಕುಟುಂಬದಲ್ಲಿ ಹುಟ್ಟಿರುವೆನು. ನಾನು ರಕ್ಷಿಸಲ್ಪಟ್ಟಿರುವದರಿಂದ ಭೂಮ್ಯಾಕಾಶಗಳನ್ನು ಉಂಟುಮಾಡಿರುವಾತನನ್ನು ಅಪ್ಪಾ ತಂದೆಯೇ ಎಂದು ಕರೆಯುವ ಪುತ್ರ ಸ್ವೀಕಾರ ಆತ್ಮವನ್ನು ಪಡೆದಿರುವೆನು. ಕರ್ತನ ವಾಗ್ದಾನಗಳಿಗೂ, ಆತ್ಮೀಕವಾದ ಉನ್ನತದ ಸಕಲ ಆಶೀರ್ವಾದಗಳಿಗೆ ಬಾಧ್ಯನಾಗಿರುವೆನು ಎಂಬ ವಿಶ್ವಾಸ ಅರಿಕೆಯೇ ನಿಮಗೆ ರಕ್ಷಣೆಯೆಂಬ ಶಿರಸ್ತ್ರಾಣವಾಗಿದೆ. ನೋಡಿ ಯೋಸೇಫನನ್ನು ಪೋಟಿಫರನ ಹೆಂಡತಿ ಹಲವು ರೀತಿಯಲ್ಲಿ ಪಾಪ ಮಾಡುವಂತೆ ಆಕರ್ಷಿಸಿದಾಗ್ಯೂ, ದೇವರಿಗೆ ವಿರುದ್ಧವಾಗಿ ನಾನು ಹೇಗೆ ಮಾಡಲಿ ಅಂದನು (ಆದಿ. 39:9). ಹಾಗೆ ಹೇಳಿ ತನ್ನ ವಸ್ತ್ರ ಹೋದರೆ ಹೋಗಲಿ ಎಂದು ಅದನ್ನು ಅವಳ ಕೈಯಲ್ಲೇ ಬಿಟ್ಟು ಓಡಿಹೋದನು. "ಪ್ರೀತಿಯು ಮರ್ಯಾದೆಗೆಟ್ಟು ನಡೆಯುವದಿಲ್ಲ" (1 ಕೊರಿಂ. 13:5). ನಿಮ್ಮ ಮನಸ್ಸು ಬಹಳ ಮುಖ್ಯವಾದದ್ದು. ಅದನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕೆಂದರೆ, ಕ್ರಿಸ್ತನ ಮನಸ್ಸು ನಿಮ್ಮಲ್ಲಿರಬೇಕು. ಆತನ ಯೋಚನೆಗಳೆಲ್ಲಾ ಪರಿಶುದ್ಧವಾದವುಗಳು. "ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ?" (ಯೋಹಾ. 8:46) ಎಂದು ಸವಾಲು ಹಾಕಿದನು.

ದೇವಜನರೇ, ಯಾವಾಗಲೂ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಧರಿಸಿಕೊಳ್ಳಿರಿ. ರಾತ್ರಿ ಸಮಯಗಳಲ್ಲಿ ಅಧಿಕವಾಗಿ ಮನಸ್ಸು ಕಾರ್ಯನಿರತವಾಗಿಸುವದರಿಂದ ಹಾಸಿಗೆಗೆ ಹೋಗುವ ಮೊದಲು ಕುಟುಂಬ ಪ್ರಾರ್ಥನೆ ವೈಯುಕ್ತಿಕ ಪ್ರಾರ್ಥನೆ ಮಾಡಿರಿ. ಆಗ ಸೈತಾನನು ನಿಮ್ಮ ಮನಸ್ಸನ್ನು ತಾಕುವದಿಲ್ಲ.

*ನೆನಪಿಗೆ : "ಪ್ರಿಯರೇ, ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯವುಳ್ಳವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿಂ.7:1).*

ಫೆಬ್ರವರಿ
10

## ಒಂಟಿತನದ ಭಾವನೆ!

ಬೆಳಿಗ್ಗೆ : ಯಾಜಕ. 8,9,10
ಸಂಜೆ : ಮತ್ತಾ 25:31–46

"ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ" (ಯೋಹಾನ. 8:29).

ಒಬ್ಬ ಮನುಷ್ಯನನ್ನು ಅಧಿಕವಾಗಿ ಬಾಧಿಸುವಂಥದ್ದು ಒಂಟಿತನದ ಭಾವನೆಯಾಗಿದೆ. ಒಂಟಿತನ ಎರಡು ರೀತಿಯದು. ಒಂದು ಮನೆಯಲ್ಲಿ ಯಾರೂ ಇಲ್ಲದೆ, ಅಯ್ಯೋ, ಮಾತನಾಡಲು ಒಬ್ಬರೂ ಇಲ್ಲವೇ, ಹೃದಯದ ಭಾರವನ್ನು ಹಂಚಿಕೊಳ್ಳಲು ಒಬ್ಬರೂ ಇಲ್ಲವೇ ಎಂದು ಮನಸ್ಸು ವೇದನೆಗೆ ಒಳಗಾಗುವದು. ಇನ್ನೊಂದು ರೀತಿಯ ಒಂಟಿತನ ಉಂಟು. ಒಂದು ಮನೆಯಲ್ಲಿ ಅನೇಕರಿದ್ದರೂ ಮನಸ್ಸುಗಳಲ್ಲಿ ಒಬ್ಬರ ಬಗ್ಗೆ ಒಬ್ಬರು ಕಹಿಯ ಭಾವನೆಗಳನ್ನಿಟ್ಟುಕೊಂಡು ಮೌನವಾಗಿರುವಾಗಲೂ ಒಂಟಿತನ ಅನುಭವ ಉಂಟಾಗುವದು.

ಬಾಳ ಸಂಗಾತಿಯನ್ನು ಕಳೆದುಕೊಂಡವರು, ಈ ಒಂಟಿತನದ ಭಾವನೆಯಿಂದ ಪರಿತಪಿಸುವದನ್ನು ನೋಡುತ್ತೇವೆ. ಕರ್ತನು ಆದಾಮನನ್ನು ಸೃಷ್ಟಿಸಿದಾಗ, ಅವನಿಗೆ ಒಂಟಿತನದ ಭಾವನೆ ಉಂಟಾಗಬಾರದೆಂದು ಆತನು ತಾನೇ ಆದಾಮನಿಗೆ ಆತ್ಮೀಕ ಸಂಗಾತಿಯಾಗಿದ್ದನು. ಆದರೆ ಒಂದು ದಿನ ಶಾರೀರಿಕವಾಗಿ ಆದಾಮನಿಗೆ ಒಬ್ಬ ಸಂಗಾತಿ ಬೇಕು; ಮನುಷ್ಯನು ಒಂಟಿಯಾಗಿರುವದು ಸರಿಯಲ್ಲವೆಂಬುದನ್ನು ಕಂಡ ಕರ್ತನು ತಕ್ಕ ಸಂಗಾತಿಯನ್ನು ಸೃಷ್ಟಿಸಿದನು. ಆದಾಮನು ಅವಳನ್ನು ನೋಡಿ "ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ, ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ. ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರಿ ಎನ್ನಿಸಿಕೊಳ್ಳುವಳು ಅಂದನು" (ಆದಿ. 2:23). ಕುಟುಂಬದಲ್ಲಿ ಗಂಡ ಹೆಂಡತಿ "ಕರ್ತನು ತಮಗೆಂದು ಆರಿಸಿದ ತಕ್ಕ ಸಂಗಾತಿ ಕರ್ತನು ನೇಮಿಸಿದ ಬಾಳಸಂಗಾತಿ" ಎಂದು ಅಂಗೀಕರಿಸುವಾಗ ಅವರ ಕುಟುಂಬ ಜೀವಿತ ಸಂತೋಷವಾಗಿರುವದು. ನೀವು ಕುಟುಂಬದೊಂದಿಗೆ ಸೇರಿ ಪ್ರಾರ್ಥಿಸಬಹುದು. ಒಬ್ಬರ ಮನಸ್ಸನ್ನು ಆಲೋಚನೆಗಳನ್ನು ಮತ್ತೊಬ್ಬರೊಡನೆ ಹಂಚಿಕೊಳ್ಳಲು ಸಾಧ್ಯ.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ನೀವು ಕರ್ತನೊಂದಿಗೆ ಅಧಿಕವಾದ ಅನ್ಯೋನ್ಯತೆಯನ್ನು ಹೊಂದಿರುವಿರಾದರೆ, ಯಾವ ರೀತಿಯ ಅಗಲಿಕೆ ಇದ್ದರೂ ಕರ್ತನು ನಿಮ್ಮೊಂದಿಗಿರುವದರಿಂದ ಒಂಟಿತನದ ಭಾವನೆ ನಿಮ್ಮನ್ನು ಕಾಡುವದಿಲ್ಲ.

*ನೆನಪಿಗೆ : ದಿಕ್ಕಿಲ್ಲದೆ ಒಬ್ಬೊಂಟಿಗಳಾಗಿರುವ ಇರುವ ವಿಧವೆಯು ದೇವರ ಮೇಲೆ ನಿರೀಕ್ಷೆಯನ್ನು ಇಟ್ಟು ಹಗಲಿರುಳು ವಿಜ್ಞಾಪನೆಗಳಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತಳಾಗಿರುವಳು (1ತಿಮೊ.5:5).*



ಫೆಬ್ರವರಿ
11

## ಪವಿತ್ರಾತ್ಮನ ಭಾವ!

ಬೆಳಿಗ್ಗೆ : ಯಾಜಕ. 11, 12
ಸಂಜೆ : ಮತ್ತಾ 26:1–19

"ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ" (ರೋಮಾ. 8:6).

ರೋಮಾಪುರದವರಿಗೆ ಬರೆದ ಪತ್ರಿಕೆಯಲ್ಲಿನ 7 ಹಾಗೂ 8ನೇ ಅಧ್ಯಾಯಗಳು ಯೋಚನೆಗಳ ಮೇಲೆ ಭಾವನೆಗಳ ಮೇಲೆ ಜಯಗಳಿಸುವ ವಿಧಾನಗಳನ್ನು ಬಹಳ ಚೆನ್ನಾಗಿ ಬೋಧಿಸುತ್ತವೆ. ಈ ಅಧ್ಯಾಯಗಳಲ್ಲಿ ಅಪೊ. ಪೌಲನು ಶರೀರಭಾವವನ್ನು ಕುರಿತು ಪವಿತ್ರಾತ್ಮನವುಗಳ ಕುರಿತೂ ಹೇಳುತ್ತಾನೆ. ಶರೀರಭಾವಗಳ ಮೇಲೆ ಮನಸ್ಸಿಡುವವರು ಅದಕ್ಕೆ ಸಂಬಂಧ ಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಪವಿತ್ರಾತ್ಮನನ್ನು ಅನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. ಶರೀರಭಾವದಂತೆ ನಡೆಯುವದು, ಮರಣ ಪವಿತ್ರಾತ್ಮನ ಮೇಲೆ ಮನಸ್ಸಿಟ್ಟು ನಡೆಯುವದು ಜೀವವೂ ಮನಶ್ಶಾಂತಿಯೂ ಆಗಿದೆ. ಏಕೆಂದರೆ ಶರೀರಭಾವ ದೇವರಿಗೆ ಶತ್ರು. ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ. ಒಳಪಡುವದಕ್ಕಾಗುವದೂ ಇಲ್ಲ. ಶರೀರಭಾವಾಧೀನರು ದೇವರಿಗೆ ಮೆಚ್ಚಿಗೆಯಾಗಿರಲಾರರು. ನಿಮ್ಮಲ್ಲಿ ದೇವರ ಆತ್ಮವು ವಾಸವಾಗಿರುವದಾದರೆ ಶರೀರಭಾವಾಧೀನರಲ್ಲ. ದೇವರ ಆತ್ಮನಿಗೆ ಅಧೀನರಾಗಿದ್ದೀರಿ. ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ ಎಂದು (ರೋಮಾ. 8:5–9). ನೀವು ಹೊಂದಿರುವ ಅಭಿಷೇಕವು ಪರಿಶುದ್ಧವಾದ ಜೀವಿತವನ್ನು ಜೀವಿಸುವಂತೆ ಪ್ರೇರಿಸುವದು. ಶರೀರ ಭಾವಕ್ಕೂ, ಸೈತಾನನ ಚಿಂತನೆಗಳಿಗೂ ವಿರೋಧವಾಗಿ ಅದು ಹೋರಾಡುವದು. ನೋಹನ ಕಾಲದಲ್ಲಿ ಮನುಷ್ಯನ ಅಕ್ರಮ ಭೂಮಿಯಲ್ಲಿ ಹೆಚ್ಚಿತು. ಮನುಷ್ಯನ ಆಲೋಚನೆಗಳೆಲ್ಲಾ ಕೆಟ್ಟವುಗಳಾಗಿಯೇ ಇದ್ದವು (ಆದಿ. 6:5). ಆಗ, ದೇವರಾತ್ಮನು ಸುಮ್ಮನಿರಲಿಲ್ಲ. ಮನುಷ್ಯನ ಆತ್ಮದೊಂದಿಗೆ ಹೋರಾಡುತ್ತಲಿತ್ತು. ಆದರೆ ಮನುಷ್ಯನು ತನ್ನ ಮನಸ್ಸನ್ನು ದೇವರಾತ್ಮನಿಗೆ ಒಪ್ಪಿಸಿಕೊಡಲಿಲ್ಲ. ಆಗ ದೇವರು ನನ್ನ ಆತ್ಮವು ಮನುಷ್ಯರಲ್ಲಿ ಶಾಶ್ವತವಾಗಿರುವದಿಲ್ಲ ಅಂದನು (ಆದಿ. 6:3).

ದೇವಮಕ್ಕಳೇ, ಕ್ರಿಸ್ತನ ಮನಸ್ಸು ನೂರಕ್ಕೆ ನೂರರಷ್ಟು ಪರಿಶುದ್ಧವಾಗಿರುವಂತೆ ಪವಿತ್ರಾತ್ಮನ ಮನಸ್ಸು ಅಷ್ಟೇ ಪರಿಶುದ್ಧವಾಗಿರುವದು. ಇಂದು ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಿ. ನೀವು ಪಾಪದಲ್ಲಿ ಬೀಳದಂತೆ ಬಯಸುವಿರಾದರೆ ಹೊತ್ತಾರೆಯಲ್ಲಿ ಕರ್ತನನ್ನು ಸ್ತುತಿಸಿ. ಅನ್ಯಭಾಷೆಗಳಲ್ಲಿ ಮಾತನಾಡಿ; ಪ್ರಾರ್ಥಿಸುವಾಗ ಆತ್ಮನಾದಾತನು ನಿಮ್ಮ ಮನಸ್ಸನ್ನು, ಭಾವನೆಗಳನ್ನು ಶುದ್ಧೀಕರಿಸುವನು. ಆಗ ಯಾವ ಭಾವನೆಗಳನ್ನಾದರೂ ಜಯಿಸಲು ಸಾಧ್ಯವಾಗುವದು.

*ನೆನಪಿಗೆ : ದೇಹದಿಂದ ಹುಟ್ಟಿದ್ದು ದೇಹವೇ, ಆತ್ಮನಿಂದ ಹುಟ್ಟಿದ್ದು ಆತ್ಮವೇ (ಯೋಹಾ.3:6).*

ಫೆಬ್ರವರಿ 12

## ಪ್ರೀತಿಸುವ ಭಾವ!

ಬೆಳಿಗ್ಗೆ : ಯಾಜಕ. 13
ಸಂಜೆ : ಮತ್ತಾ 26:20–56

"ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು. ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಲೂಕ.10:27).

ಎಲ್ಲಾ ಆಜ್ಞೆಗಳಲ್ಲಿ ಮುಖ್ಯವಾದ ಆಜ್ಞೆ ಕರ್ತನನ್ನು ಪ್ರೀತಿಸಬೇಕು ಎಂಬುದೇ. ಯಾವ ರೀತಿ ಪ್ರೀತಿಸಬೇಕು, ಪೂರ್ಣ ಹೃದಯದಿಂದಲೂ, ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕೆಂದು ಸತ್ಯವೇದ ಹೇಳುತ್ತದೆ. ನಿಮ್ಮ ಮನಸ್ಸು ಕರ್ತನಿಗೆ ವಿಧೇಯವಾಗಿಬಿಟ್ಟರೆ ಅದು ಊರು ಸುತ್ತುವದಿಲ್ಲ. ಮನುಷ್ಯನ ಪ್ರೀತಿಯನ್ನು ಎದುರುನೋಡುವದಿಲ್ಲ. ಕರ್ತನಿಗೆ ಇಷ್ಟವಿಲ್ಲದ ಅನ್ಯ ಪ್ರೀತಿಯನ್ನು ಹುಡುಕುವದಿಲ್ಲ. ನಿಮ್ಮ ಮನಸ್ಸು ದೇವರನ್ನು ಪ್ರೀತಿಸುವ ಸಾಕ್ಷಿ ಪೀಠವಾಗಿರಲಿ. ಅದಕ್ಕಾಗಿಯೇ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಸುರಿಸಲ್ಪಟ್ಟಿರುವದು (ರೋಮಾ. 5:5).

ಪ್ರಿಯರೇ, ದೇವರು ನಿಮ್ಮನ್ನು ಹೇಗೆ ಪ್ರೀತಿಸಿದನೆಂಬುದನ್ನು ಯೋಚಿಸಿನೋಡಿರಿ. ಕಳಂಕ, ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ, ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನ ಮುಂದೆ ನಿಲ್ಲಿಸಿಕೊಳ್ಳಲು (ಎಫೆ. 5:27) ತನ್ನನ್ನು ತಾನೇ ಒಪ್ಪಿಸಿಕೊಟ್ಟು ಯಜ್ಞಾರ್ಪಿತನಾದನು. ಕಲ್ವಾರಿಯಲ್ಲಿ ಜಡಿಯಲು ತನ್ನ ದೇಹವನ್ನು ಒಪ್ಪಿಸಿಕೊಟ್ಟು ರಕ್ತ ಚೆಲ್ಲಿದನು. ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ, ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ ಎಂದು ವಾಗ್ದಾನ ಮಾಡಿರುವನು (ಯೆರೆ. 31:3). ನೀವು ಆತನನ್ನು ಪ್ರೀತಿಸುವ ಮೊದಲೇ ಆತನು ನಿಮಗಾಗಿ ಪ್ರಾಣವನ್ನು ಕೊಟ್ಟು ತನ್ನ ಪ್ರೀತಿಯನ್ನು ತೋರಿಸಿದನು.

ದೇವಜನರೇ, ಇಷ್ಟೊಂದು ಪ್ರೀತಿ ಇರುವ ದೇವರನ್ನು ನೀವು ಪ್ರೀತಿಸದಿರಲು ಹೇಗೆ ಸಾಧ್ಯ? ನೀವು ಪ್ರೀತಿಯಲ್ಲಿ ಕೊರತೆಯುಳ್ಳವರಾಗುವಾಗ ದೇವರ ಆಂತರ್ಯ ಗಾಯಗೊಳ್ಳುವದು. ನೀವು ಕ್ರಿಸ್ತನನ್ನು ಪ್ರೀತಿಸುವಾಗ ಕರ್ತನು ನಿಮಗೆ ಜವಾಬ್ದಾರಿಯನ್ನು, ಕರ್ತವ್ಯವನ್ನು ಸೇವೆಯನ್ನು ನೀಡುವನು. ಮಾತ್ರವಲ್ಲ, ತನ್ನ ಕರಗಳಲ್ಲಿನ ಪಾತ್ರೆಗಳನ್ನಾಗಿ ಉಪಯೋಗಿಸುವನು. ಕರ್ತನನ್ನು ಪ್ರೀತಿಸಬೇಕೆಂಬ ಮನಸ್ಸನ್ನು ನಿಮ್ಮೊಳಗೆ ದೃಢವಾಗಿ ಧರಿಸಿಕೊಳ್ಳಿರಿ. ಆಗ ಕರ್ತನ ಪಾದದಲ್ಲಿ ಕುಳಿತು ಪ್ರಾರ್ಥಿಸುವಿರಿ. ಸತ್ಯವೇದವನ್ನು ಓದಿ ಧ್ಯಾನಿಸುವಿರಿ. ಆತ್ಮಗಳನ್ನು ಆತನ ಬಳಿಗೆ ನಡೆಸುವಿರಿ.

*ನೆನಪಿಗೆ : "ಮೊದಲಿದ್ದ ನಿನ್ನ ಪ್ರೀತಿಯನ್ನು ನೀನು ತೊರೆದು ಬಿಟ್ಟಿದ್ದೀ ಎಂದು ನಾನು ನಿನ್ನ ಮೇಲೆ ತಪ್ಪು ಹೊರಿಸಬೇಕಾಗುತ್ತದೆ. ಆದುದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ಸ್ಮರಣೆಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ" (ಪ್ರಕ. 2:4–5).*



ಫೆಬ್ರವರಿ 13

## ಸ್ತುತಿಸುವ ಮನಸ್ಸು!

ಬೆಳಿಗ್ಗೆ : ಯಾಜಕ. 14
ಸಂಜೆ : ಮತ್ತಾ 26:57–75

"ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ, ಆತನ ಉಪಕಾರಗಳನ್ನು ನೆನಸಲಿಲ್ಲ, ಆತನನ್ನು ಸ್ತುತಿಸಲಿಲ್ಲ.... ಅವರ ಮನಸ್ಸು ಕತ್ತಲಾಯಿತು" (ರೋಮಾ. 1:21).

ನಾವು ದೇವರನ್ನು ಸ್ತುತಿಸಲು ಕೋಟ್ಯಾನುಕೋಟಿ ಕಾರಣಗಳುಂಟು. ಎಷ್ಟು ಅದ್ಭುತವಾಗಿ ಆತನು ನಿಮ್ಮ ಶರೀರವನ್ನು ಸೃಷ್ಟಿಸಿರುವನು ಎಂಬುದನ್ನು ನೆನಸಿ ಆತನನ್ನು ಸ್ತುತಿಸಿರಿ. ಈ ಭೂಮಿಯಲ್ಲಿ ಜೀವಿಸಲು ನಿಮಗೆ ಒಂದು ಅವಕಾಶವನ್ನು ನೀಡಿರುವನಲ್ಲವೇ! ಒಂದೊಂದು ದಿನವೂ ಆಹಾರ ನೀಡಿ ನಡೆಸುವನು. ಒಬ್ಬ ತಾಯಿ ತನ್ನ ಮಗುವನ್ನು ಸಂತೈಸುವಂತೆ ಸಂತೈಸುವನು. ತಂದೆ ತನ್ನ ಮಗುವಿಗೆ ಕನಿಕರತೋರಿಸುವಂತೆ ಕನಿಕರಿಸುವನು. ಅದನ್ನು ನೆನಸಿ ನೆನಸಿ ನೀವು ಕರ್ತನನ್ನು ಸ್ತುತಿಸಿರಿ. ಸತ್ಯವೇದದಲ್ಲಿ ಹೇಳಿರುವ ಆತನ ಅದ್ಭುತಕಾರ್ಯಗಳನ್ನೆಲ್ಲಾ ನೆನಸಿ ಸ್ತುತಿಸಿರಿ.

ಇಂದು ಅನೇಕರು ಕರ್ತನನ್ನು ಸ್ತುತಿಸುವದಿಲ್ಲ. ಕೆಲವರು ಸಮಸ್ಯೆಗಳು ಬಂದಾಗ ಆತನನ್ನು ಅಲ್ಲಗಳೆಯುವರು. "ದೇವರೆಂಬುವನು ಇಲ್ಲವೇ ಇಲ್ಲ. ದೇವರನ್ನು ಕಲ್ಪಿಸಿದವನು ಮೂರ್ಖನು" ಎಂದು ಹೇಳುವರು. ಅಂಥವರ ಕುರಿತು ಸತ್ಯವೇದ ಹೀಗೆ ಹೇಳುತ್ತದೆ. "ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ. ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿ ಮಾಡಿ ಫಲಕಾಣಲಿಲ್ಲ. ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು (ರೋಮಾ. 1:21). ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದರು (ರೋಮಾ. 1:24). ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು (ರೋಮಾ. 1:26). ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು (ರೋಮಾ. 1:28) ಎಂದು ಸ್ತುತಿಯ ಮಹಿಮೆಯನ್ನು, ಶಕ್ತಿಯನ್ನು, ಕೃಪೆಯನ್ನು ಅರಿತವರು ನಿಶ್ಚಯವಾಗಿ ಪೂರ್ಣಹೃದಯದಿಂದಲೂ, ಪೂರ್ಣ ಬಲದಿಂದಲೂ ಸ್ತುತಿಸುವರು. ಕರ್ತನ ಸ್ತುತಿ ಹೃದಯದಾಳದಿಂದ, ಕೃತಜ್ಞತೆಯಿಂದ ಹೊರಟುಬರುವ ನೀರಿನ ಬುಗ್ಗೆಯಾಗಿದೆ.

ದೇವಮಕ್ಕಳೇ, ನೀವು ಈ ಲೋಕದಲ್ಲಿ ಬಾಳುವಾಗ ಯಾವ ರೀತಿಯ ಮನಸ್ಸು ಹೊಂದಿದವರಾಗಿ ಬಾಳುತ್ತೀರೋ, ಮರಣದ ಸಮಯದಲ್ಲೂ ಹಾಗೆಯೇ ಇರುತ್ತೀರಿ. ಸುಖ ದುಃಖಗಳಲ್ಲಿ ಯಾವಾಗಲೂ ಕರ್ತನನ್ನು ಸ್ತುತಿಸಿ ಸಂತೋಷಿಸುವಿರಾದರೆ, ನಿಮ್ಮ ಜೀವಿತ ಸುಂದರವಾಗಿಯೇ ಇರುವದು. ಎಲ್ಲಾ ಸಮಯಗಳಲ್ಲೂ ಕರ್ತನನ್ನು ಸ್ತುತಿಸಿರಿ.

*ನೆನಪಿಗೆ : "ನಾನಾದರೋ ಸ್ತೋತ್ರಧ್ವನಿಯಿಂದ ನಿನಗೆ ಯಜ್ಞವನ್ನರ್ಪಿಸುವೆನು. ಮಾಡಿಕೊಂಡ ಹರಕೆಯನ್ನು ಸಲ್ಲಿಸುವೆನು" (ಯೋನ. 2:9).*

ಫೆಬ್ರವರಿ 14

## ವಾಕ್ಯದ ಧ್ಯಾನ!

ಬೆಳಿಗ್ಗೆ : ಯಾಜಕ. 15, 16
ಸಂಜೆ : ಮತ್ತಾ 27:1–26

"ಅವನು ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ" (ಜ್ಞಾನೋ. 23:7).

ಮನಸ್ಸಿನಲ್ಲಿ ಏರ್ಪಡುವ ಯೋಚನೆಗಳು ಅತಿಮುಖ್ಯವಾದವುಗಳು. ಸತ್ಯವೇದ ವಾಕ್ಯಗಳಂತೆ ನಿಮ್ಮ ಮನಸ್ಸಿನ ವಿಚಾರಗಳನ್ನು ರೂಪಿಸಿಕೊಳ್ಳುವಿರಾದರೆ, ನೀವು ಭಾಗ್ಯವಂತರಾಗಿರುವಿರಿ. "ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು... ಅವನ ಕಾರ್ಯಗಳೆಲ್ಲಾ ಸಫಲವಾಗುವದು" (ಕೀರ್ತ. 1:2,3) ಎಂದು ಸತ್ಯವೇದ ಹೇಳುತ್ತದೆ.

ಯೆಹೋಶುವನು ಕಾನಾನ್ ದೇಶವನ್ನು ಅದರಲ್ಲಿದ್ದ ಏಳು ಜನಾಂಗಗಳನ್ನೂ, ಮೂವತ್ತೊಂದು ಅರಸರನ್ನು ಜಯಿಸುವ ಮೊದಲು ಕರ್ತನು ಯೆಹೋಶುವನಿಗೆ ಮೊದಲನೆಯದಾಗಿ ಒಂದು ವಾಗ್ದಾನವನ್ನು ನೀಡಿದನು. ಅದನ್ನು ಯೆಹೋಶುವನು ತನ್ನ ಮನಸ್ಸಿನಲ್ಲಿ ದೃಢವಾಗಿ ನಂಬುವದು ಅವಶ್ಯವಾಗಿತ್ತು. ಅದೇನಂದರೆ ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು. ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ. ಸ್ಥಿರ ಚಿತ್ತನಾಗಿರು, ಧೈರ್ಯದಿಂದಿರು (ಯೆಹೋ. 1:5,6). ಎರಡನೆಯದಾಗಿ ಒಂದು ಆಲೋಚನೆ ನೀಡಿದನು "ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿ ಇರಲಿ. ಹಗಲಿರುಳು ಅದನ್ನೇ ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ" ಎಂದು (ಯೆಹೊ. 1:8). ದೇವರ ವಾಕ್ಯವನ್ನು ನೀವು ಎಷ್ಟರಮಟ್ಟಿಗೆ ಓದಿ, ಧ್ಯಾನಿಸಿ, ಮನಸ್ಸಿನಲ್ಲಿ ಇಟ್ಟುಕೊಂಡು ಅದರಂತೆ ಜೀವಿಸುವಿರೋ ಅಷ್ಟರ ಮಟ್ಟಿಗೆ ನೀವು ಉನ್ನತಿಗೆ ಬರುವಿರಿ. ಜಯಭರಿತ ಜೀವಿತ ನಡೆಸುವಿರಿ. ದೇವರ ವಾಕ್ಯಗಳು ಒಬ್ಬ ಮನುಷ್ಯನಿಗೆ ಮಾರ್ಗದರ್ಶಿಯಂತೆ ಇರುವದು.

ದೇವಜನರೇ, ದೇವರ ವಾಕ್ಯ, ದೇವರ ಚಿತ್ತ ಇವುಗಳಂತೆ ನಿಮ್ಮ ಮನಸ್ಸನ್ನು ಕರ್ತನಿಗೆಂದು ಒಪ್ಪಿಸಿ ಅದರಂತೆ ನೀವು ಬಾಳಬೇಕೆಂದು ಕರ್ತನು ನಿಮ್ಮಿಂದ ನಿರೀಕ್ಷಿಸುತ್ತಾನೆ. ಆದ್ದರಿಂದ ನಿಮ್ಮ ದೇಹಾತ್ಮಗಳನ್ನು ಮೀಸಲಾಗಿಯೂ, ಮೆಚ್ಚಿಗೆಯಾಗಿರುವ ಸಜೀವಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕ ಆರಾಧನೆಯಾಗಿದೆ (ರೋಮಾ. 12:1).

*ನೆನಪಿಗೆ : "ಚಪಲಚಿತ್ತರನ್ನು ದ್ವೇಷಿಸುತ್ತೇನೆ, ನಿನ್ನ ಧರ್ಮಶಾಸ್ತ್ರವನ್ನು ಪ್ರೀತಿಸುತ್ತೇನೆ" (ಕೀರ್ತ.119:113).*



ಫೆಬ್ರವರಿ 15

## ಒಂದೇ ಮನಸ್ಸು!

ಬೆಳಿಗ್ಗೆ : ಯಾಜಕ. 17, 18
ಸಂಜೆ : ಮತ್ತಾ 27:27–56

"ಒಂದೇ ಮನಸ್ಸುಳ್ಳವರಾಗಿರಿ, ಸಮಾಧಾನದಿಂದಿರಿ; ಆಗ ಪ್ರೀತಿಯನ್ನೂ, ಶಾಂತಿಯನ್ನೂ ಕೊಡುವ ದೇವರು ನಿಮ್ಮ ಸಂಗಡ ಇರುವನು" (2 ಕೊರಿಂ. 13:11).

ಸತ್ಯವೇದವು ಒಂದು ಮನಸ್ಸನ್ನು ಪ್ರೀತಿಯ ಅನ್ಯೋನ್ಯತೆಯನ್ನು ಕುರಿತು ಬಹಳವಾಗಿ ಹೇಳುವದು. ಅಪೊ. ಪೌಲನು ಕೊರಿಂಥ ಸಭೆಯವರಿಗೆ ಬರೆಯುವಾಗ, ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ, ಅನ್ಯೋನ್ಯ ಭಾವವುಳ್ಳವರೂ, ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ (ಫಿಲಿ.2:2) ಎಂದು ಬರೆಯುತ್ತಾನೆ.

ಕೆಲವು ಕುಟುಂಬಗಳಲ್ಲಿ ಗಂಡ ಹೆಂಡತಿ ಪ್ರೀತಿಯ ಅನ್ಯೋನ್ಯತೆ ಉಳ್ಳವರಾಗಿ ಒಮ್ಮನಸ್ಸಿನಿಂದ ಬಾಳುವಾಗ, ಒಬ್ಬರಂತೆಯೇ ಇನ್ನೊಬ್ಬರು ಮಾರ್ಪಡುವರು ಎಂಬುದನ್ನು ನಾವು ತಿಳಿದಿದ್ದೇವೆ. ಒಂದು ಮನಸ್ಸಿನ ಜೀವಿತ ಆಶೀರ್ವಾದಕರವಾದ ಜೀವಿತ. ಹೆಂಡತಿ, ಗಂಡನನ್ನು ಹೇಗೆ ಮೆಚ್ಚಿಸಬೇಕು, ಗಂಡ ಹೆಂಡತಿಯನ್ನು ಹೇಗೆ ಮೆಚ್ಚಿಸಬೇಕೆಂದು ಅರಿತು ಜೀವಿಸುವಾಗ ಒಬ್ಬರೊಂದಿಗೆ ಒಬ್ಬರು ಮನಬಿಚ್ಚಿ ಮಾತನಾಡಲು ಸಾಧ್ಯ. ಇಬ್ಬರ ಮನಸ್ಸೂ ಯಥಾರ್ಥವಾಗಿರುವದಾದರೆ ಅಲ್ಲಿ ಒಮ್ಮನಸ್ಸು ಏರ್ಪಡಲು ಸಾಧ್ಯ. ಇಬ್ಬರ ಮಾತುಗಳೂ ಕಾರ್ಯಗಳೂ ಒಂದೇ ಆಗಿರುತ್ತದೆ. ಅಂಥಹ ಕುಟುಂಬಗಳಲ್ಲಿ ಸೈತಾನನು ಪ್ರವೇಶಿಸಲು ಸಾಧ್ಯವಿಲ್ಲ. ಹಾಗೆ ಒಂದು ವೇಳೆ ಪ್ರವೇಶಿಸಿದರೂ, ಇಬ್ಬರೂ ಸೇರಿ ಮಾಡುವ ಏಕಮನಸ್ಸಿನ ಪ್ರಾರ್ಥನೆ, ಸೈತಾನನ ತಂತ್ರಗಳನ್ನು ಹೊಡೆದೋಡಿಸುವ ಆಯುಧವಾಗಿದೆ. ಅಂಥಹ ಕುಟುಂಬ ಒಂದು ಚಿಕ್ಕ ಪರಲೋಕದಂತೆ ಬೆಳಗುವದು. ಒಂದು ಮನಸ್ಸು ಅನ್ಯೋನ್ಯತೆ, ಪ್ರೀತಿ, ಗಂಡ ಹೆಂಡತಿಯರಿಗೆ ಮಾತ್ರ ಸೀಮಿತವಲ್ಲ. ಒಡಹುಟ್ಟಿದವರ ಮಧ್ಯೆ, ಹೆತ್ತವರ ಮಕ್ಕಳ ಮಧ್ಯೆಯೂ ಇರುವದು ಅವಶ್ಯ ಮಾತ್ರವಲ್ಲ, ಕ್ರೈಸ್ತ ಸಭೆಗಳಲ್ಲೂ, ಇರಬೇಕೆಂದು ಅಪೊ. ಪೌಲನು ತನ್ನ ಪತ್ರಿಕೆಯಲ್ಲಿ ಬರೆಯುತ್ತಾನೆ. ಸಭೆಗಳಲ್ಲಿ ಕುಟುಂಬಗಳಲ್ಲಿ ಒಮ್ಮನಸ್ಸು ಇರುವಾಗ ಅಲ್ಲಿ ಸಮಾಧಾನ ಇರುತ್ತದೆ. ದೇವರ ಪ್ರೀತಿ, ಅಲ್ಲಿ ನೆಲೆಸುತ್ತದೆ. ಕರ್ತನೇ ಅಲ್ಲಿ ನೆಲೆಗೊಳ್ಳುವನು.

ದೇವಮಕ್ಕಳೇ, ಇಂದು ನಿಮ್ಮ ಕುಟುಂಬದಲ್ಲಿ ಒಮ್ಮನಸ್ಸು ಇರುವದಾ? ಸಮಾಧಾನ ಪ್ರೀತಿ ಇರುವದಾ? ಒಂದು ವೇಳೆ ಇಲ್ಲವೆಂದರೆ ಕೂಡಲೇ ಕ್ರಿಸ್ತನ ಪಾದಗಳಲ್ಲಿ ಕುಳಿತು ನಿಮ್ಮಲ್ಲಿರುವ ಕೊರತೆಗಳನ್ನು ಅರಿಕೆ ಮಾಡಿ ಕ್ಷಮಾಪಣೆ ಬೇಡಿರಿ. ಆತನು ನಿಮ್ಮನ್ನು ತನ್ನ ರಕ್ತದಿಂದ ತೊಳೆದು ಶುದ್ಧೀಕರಿಸಿ ತನ್ನ ಸಮಾಧಾನ, ಶಾಂತಿ, ನಿಮ್ಮ ಹೃದಯದೊಳಗೆ ನೆಲೆಸುವಂತೆ ಕೃಪೆ ತೋರಿಸುವನು.

*ನೆನಪಿಗೆ : "ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ" (ಫಿಲಿ. 2:4).*

ಫೆಬ್ರವರಿ 16

# ದೀನಮನಸ್ಸು!

ಬೆಳಿಗ್ಗೆ : ಯಾಜಕ. 19, 20
ಸಂಜೆ : ಮತ್ತಾ 27:57–66

"ಪಕ್ಷಪಾತದಿಂದಾಗಲಿ, ಒಣ ಹೆಮ್ಮೆಯಿಂದಾಗಲಿ, ಯಾವದನ್ನೂ ಮಾಡದೆ ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ" (ಫಿಲಿ. 2:3).

"ಯೇಸುಕ್ರಿಸ್ತನ ಮನಸ್ಸು ನಿಮ್ಮಲ್ಲಿಯೂ ಇರಲಿ" ಎಂದು ಅಪೊ.ಪೌಲನು ರೋಮಾಪುರದವರಿಗೂ, ಫಿಲಿಪ್ಪಿ ಪಟ್ಟಣದವರಿಗೂ ಬರೆಯುತ್ತಾನೆ. ಅದರಲ್ಲಿ ಮುಖ್ಯವಾಗಿ ತಾಳ್ಮೆಯ ಕುರಿತಾಗಿ ದೀನಭಾವದ ಕುರಿತಾಗಿ ಸೂಚಿಸುತ್ತಾನೆ. ನೀವೂ ಸಹ ತಾಳ್ಮೆಯನ್ನು ಧರಿಸಿಕೊಳ್ಳಿರಿ. ತಾಳ್ಮೆಯುಳ್ಳವರಿಗೆ ದೇವರು ದಯೆ ತೋರಿಸುವನು. ತಾಳ್ಮೆಯುಳ್ಳವರನ್ನು ಉನ್ನತಿಗೆ ತರುವನು.

ಆತನು (ಯೇಸುಕ್ರಿಸ್ತ) ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನವಾದ ಪದವಿಯನ್ನು ಬಿಡಲೊಲ್ಲೆನೆಂದೆಣಿಸದೆ, ತನ್ನನ್ನು ಬರಿದು ಮಾಡಿಕೊಂಡು, ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು, ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು (ಫಿಲಿ. 2:6–8) ಎಂದು ಸತ್ಯವೇದ ಹೇಳುತ್ತದೆ. ನಿಮ್ಮ ವಿದ್ಯೆಯನ್ನು ಕುರಿತೋ, ಅಂತಸ್ತನ್ನು ಕುರಿತೋ, ಐಶ್ವರ್ಯವನ್ನು ಕುರಿತೋ, ಜಾತಿಯನ್ನು ಕುರಿತೋ ಹೆಮ್ಮೆ ಪಡಬೇಡಿರಿ. ಇತರರನ್ನು ನಿಮಗಿಂತ ಅಲ್ಪರೆಂದು ಎಣಿಸದಿರಿ. ಯೇಸುಕ್ರಿಸ್ತನು ರಾಜಾಧಿರಾಜನೂ, ದೇವಕುಮಾರನೂ ಆಗಿದ್ದಾಗ್ಯೂ ಈ ಲೋಕದಲ್ಲಿ ತನ್ನನ್ನು ತಾನು ತಗ್ಗಿಸಿಕೊಂಡನು. ಪಸ್ಕದ ಹಿಂದಿನ ಸಂಜೆ ತನ್ನ ಶಿಷ್ಯರ ಕಾಲುಗಳನ್ನು ತೊಳೆದು ತನ್ನಂತೆ ತನ್ನ ಹಿಂಬಾಲಕರೂ, ತಗ್ಗಿದ ಮನಸ್ಸುಳ್ಳವರಾಗಿರಬೇಕೆಂದು ತೋರಿಸಿಕೊಟ್ಟನು. ನಿಮ್ಮ ಏಳಿಗೆಗೆ ನಿಮ್ಮ ಮಕ್ಕಳ ಆಶೀರ್ವಾದಕ್ಕೆ ಕರ್ತನ ಕೃಪೆಯೇ ಕಾರಣ ಎಂದು ಹೇಳಿ ನಿಮ್ಮನ್ನು ತಗ್ಗಿಸಿಕೊಂಡು ಕರ್ತನನ್ನು ಮೇಲಕ್ಕೆ ಎತ್ತಿ ಹಿಡಿಯಿರಿ. 'ನಾನಲ್ಲ ಕ್ರಿಸ್ತನೇ' ಎಂದು ಕ್ರಿಸ್ತನಲ್ಲಿ ಮರೆಮಾಡಿಕೊಂಡ ಜೀವಿತವನ್ನು ಜೀವಿಸಿರಿ. ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ" (ರೋಮಾ.12:16) ಎಂದು ಸತ್ಯವೇದ ಎಚ್ಚರಿಸುತ್ತದೆ.

ದೇವಜನರೇ, ಹೆಮ್ಮೆಯನ್ನು ದೇವರು ಅಸಹ್ಯಿಸುತ್ತಾನೆ. ಆದ್ದರಿಂದ ನಿಮ್ಮ ಜೀವಿತದಲ್ಲಿ ಹೆಮ್ಮೆಯ ಭಾವನೆಯನ್ನು ಹೊಡೆದೋಡಿಸಿರಿ. ದೀನ ಮನಸ್ಸನ್ನು ಧರಿಸಿಕೊಳ್ಳಿರಿ.

*ನೆನಪಿಗೆ : "ನಿನ್ನ ಮೊದಲನೆಯ ಸ್ಥಿತಿಯು ಅಲ್ಪವಾಗಿದ್ದರೂ, ನಿನ್ನ ಕಡೆಯ ಸ್ಥಿತಿಯು ಬಹಳ ವೃದ್ಧಿಹೊಂದುವದು" (ಯೋಬ. 8:7).*



ಫೆಬ್ರವರಿ 17

# ಯೋಚಿಸಿ ನೋಡಿರಿ!

ಬೆಳಿಗ್ಗೆ : ಯಾಜಕ. 21, 22
ಸಂಜೆ : ಮತ್ತಾ 28

"ಈ ಸಮಯದಲ್ಲಿ ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ–ನಿಮ್ಮಗತಿ ಏನಾಗಿದೆ ಎಂದು ಮನಸ್ಸಿಗೆ ತಂದುಕೊಳ್ಳಿರಿ" (ಹಗ್ಗಾಯ 1:5).

ಇಸ್ರಾಯೇಲ್ಯರ ಬಳಿ ದೇವರು "ಐಗುಪ್ತದಿಂದ ನಿಮ್ಮನ್ನು ಬಿಡುಗಡೆ ಮಾಡಿ ನಡೆಸಿಕೊಂಡು ಬಂದ ಮಾರ್ಗಗಳನ್ನೆಲ್ಲಾ ಮರೆತುಬಿಡದೆ, ನೆನಪಿಸಿಕೊಳ್ಳಿರಿ" ಎಂದು ಹೇಳಿದನು. ಹಾಗೆಯೇ ಕರ್ತನಾದ ಯೇಸುಕ್ರಿಸ್ತನು "ನನ್ನ ಮರಣವನ್ನು ನೆನಪುಮಾಡಿಕೊಳ್ಳಿರಿ, ನಿಮಗಾಗಿ ಸುರಿಸಲ್ಪಟ್ಟ ರಕ್ತವನ್ನು ಪಾನಮಾಡಿ ನನ್ನ ಶರೀರವಾದ ಮಾಂಸವನ್ನು ಭುಜಿಸಿರಿ" ಎಂದು ಶಿಷ್ಯರಿಗೆ ಹೇಳಿದನು. ಇದನ್ನೇ ನಾವು ರಾತ್ರಿ ಸಂಸ್ಕಾರ ಭೋಜನವಾಗಿ ಆಚರಿಸುತ್ತಾ ಬಂದಿದ್ದೇವೆ.

ದಾವೀದನು ತನ್ನ ಆತ್ಮಕ್ಕೆ "ಕರ್ತನು ಮಾಡಿದ ಸಕಲ ಉಪಕಾರಗಳನ್ನು ಮರೆಯಬೇಡ" ಎಂದು ಹೇಳಿದನು (ಕೀರ್ತ. 103:2). ನೀವೂ ಕರ್ತನು ಮಾಡಿದ ಉಪಕಾರಗಳನ್ನು ಕೊಟ್ಟ ಎಲ್ಲಾ ಆಶೀರ್ವಾದಗಳನ್ನು ನೆನಸಿ ಸ್ತುತಿಸುವದೂ, ಸ್ತೋತ್ರ ಮಾಡುವದೂ ತಕ್ಕದ್ದಾಗಿದೆ. ಇದರಿಂದ ಇನ್ನೂ ಅಧಿಕವಾದ ಅಶೀರ್ವಾದಗಳನ್ನು ಕರ್ತನಿಂದ ಪಡೆದುಕೊಳ್ಳುವಿರಿ. ಅದೇ ವೇಳೆಯಲ್ಲಿ ಲೋಕದ ಅಂತ್ಯವನ್ನೂ ಕರ್ತನ ಬರುವಿಕೆಯನ್ನೂ ಯೋಚಿಸಬೇಕು. ನೀವು ಓಡುತ್ತಿರುವ ಕ್ರೈಸ್ತ ಓಟವು ಕ್ರಮಬದ್ಧವಾಗಿದೆಯಾ? ಓಟದ ಅಂತ್ಯದಲ್ಲಿ ನೀತಿಯೆಂಬ ಕಿರೀಟವನ್ನು ಪಡೆದುಕೊಳ್ಳುವಿರಾ? ಕರ್ತನು ಎದುರುನೋಡುವ ಪವಿತ್ರತೆ, ನೀತಿ, ಪ್ರಾರ್ಥನಾ ಜೀವಿತ ನಿಮ್ಮ ಬಾಳಿನಲ್ಲಿ ಇರುವದಾ? ಇಲ್ಲವೇ ತಪ್ಪಿತಸ್ಥ ಮನೋಭಾವನೆಯಿಂದ ಬಾಧಿಸಲ್ಪಟ್ಟು ನಂಬಿಕೆಯಿಲ್ಲದೆ ಓಡುತ್ತಿರುವಿರಾ? ನಿಮ್ಮನ್ನು ಪರೀಕ್ಷಿಸಿಕೊಂಡು ಸರಿಪಡಿಸಿಕೊಳ್ಳಿರಿ. ಅನ್ಯಜನಾಂಗದವನಾದ ಪ್ರವಾದಿಯಾದ ಬಿಳಾಮನು ಸಜ್ಜನರಾದ ಇಸ್ರಾಯೇಲ್ಯರು ಸಾಯುವ ರೀತಿಯಲ್ಲೇ ನಾನೂ ಸಾಯಬೇಕು, ಅವರಿಗುಂಟಾಗುವ ಅವಸಾನವು ನನಗೂ ಆಗಬೇಕೆಂದು ಬಯಸಿದನು (ಅರಣ್ಯ.23:10). ಅವನು ಹಾಗೆ ಬಯಸಿದಾಗ್ಯೂ, ತನ್ನ ಜೀವಿತವನ್ನು ಸರಿಪಡಿಸಿಕೊಂಡು ಕರ್ತನಿಗೆ ಪ್ರಿಯನಾಗಿ ಜೀವಿಸದೆ ಹಣದಾಶೆಗೆ ಬಲಿಯಾಗಿ ಇಸ್ರಾಯೇಲ್ಯರನ್ನು ನಾಶಮಾಡುವಂಥ ಆಲೋಚನೆಗಳನ್ನು ಬಾಲಾಕನಿಗೆ ಹೇಳಿ ದೈವಕೋಪಕ್ಕೆ ಒಳಗಾದನು.

ದೇವಜನರೇ, ಕರ್ತನು ಸದಾ ನಿಮ್ಮನ್ನು ನೋಡುತ್ತಲೇ ಇರುವನು. ನಿಮ್ಮ ಮೇಲೆ ಅಕ್ಕರೆಯುಳ್ಳವನಾಗಿರುವನು. ವರ್ಷದ ಪ್ರಾರಂಭದಿಂದ ಅಂತ್ಯದವರೆಗೂ ಆತನು ನಿಮ್ಮನ್ನು ಕಟಾಕ್ಷಿಸುವನು (ಧರ್ಮೋ. 11:12). ಆದ್ದರಿಂದ ಕರ್ತನಿಗೆ ಮೆಚ್ಚಿಕೆಯಾದ ಜೀವಿತವನ್ನು ಜೀವಿಸಿರಿ. ಅಂತ್ಯದಲ್ಲಿ ನೀತಿಯೆಂಬ ಕಿರೀಟ ನಿಮ್ಮದಾಗುವದು.

*ನೆನಪಿಗೆ : "ಕಡೇವರೆಗೂ ತಾಳುವವನೇ ರಕ್ಷಣೆ ಹೊಂದುವನು. ಇದಲ್ಲದೆ ಪರಲೋಕ ರಾಜ್ಯದ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಯಾಗಿ ಸಾರಲ್ಪಡುವದು, ಆಗ ಅಂತ್ಯವು ಬರುವದು" (ಮತ್ತಾ. 24:13,14).*

**ಫೆಬ್ರವರಿ 18**

## ಮನಸ್ಸುಂಟಾ?

ಬೆಳಿಗ್ಗೆ : ಯಾಜಕ. 23, 24
ಸಂಜೆ : ಮಾರ್ಕ. 1:1–20

"ದಿಕ್ಕಿಲ್ಲದವನನ್ನು ಪರಾಂಬರಿಸುವವನು ಧನ್ಯನು; ಯೆಹೋವನು ಅವನನ್ನು ಆಪತ್ಕಾಲದಲ್ಲಿ ರಕ್ಷಿಸುವನು" (ಕೀರ್ತ. 41:1).

ದಾವೀದನು ಸೌಲನಿಂದ ಬಾಧಿಸಲ್ಪಟ್ಟು ದಿಕ್ಕೆಟ್ಟವನಂತೆ ಅರಣ್ಯದಲ್ಲೂ, ಗುಹೆಗಳಲ್ಲೂ ಜೀವಿಸುವ ಸ್ಥಿತಿ ಏರ್ಪಟ್ಟಿತು. ಆಗ ಅನೇಕರು ದಾವೀದನ ಮೇಲೆ ಅನುತಾಪಗೊಂಡು, ಹಲವು ರೀತಿಯಲ್ಲಿ ಸಹಾಯ ಮಾಡಿದರು. ಅದನ್ನು ದಾವೀದನು ಮರೆಯಲಿಲ್ಲ. ದೆಸೆಗೆಟ್ಟವರಿಗೆ ಸಹಾಯ ಮಾಡುವದರಿಂದ ಬರುವ ಭಾಗ್ಯವನ್ನು ಪ್ರತಿಯೊಬ್ಬರೂ ಹೊಂದಿಕೊಳ್ಳಬೇಕೆಂದು ಬಯಸಿದನು. ಕರುಣೆಯುಳ್ಳವರು ಕರುಣೆ ಹೊಂದುವರು.

"ಬಡವರಿಗೆ ದಯೆ ತೋರಿಸುವವನು ಯೆಹೋವನಿಗೆ ಸಾಲಕೊಡುವನು, ಆ ಉಪಕಾರಕ್ಕೆ ಯೆಹೋವನೇ ಪ್ರತ್ಯುಪಕಾರ ಮಾಡುವನು" (ಜ್ಞಾನೋಕ್ತಿ. 19:17) ಎಂದು ಜ್ಞಾನಿಯಾದ ಸೊಲೊಮೋನನು ಹೇಳುತ್ತಾನೆ. ಹಣದ ಕೊರತೆಯಿಂದ ದಿಕ್ಕೆಟ್ಟವರು ಇರುವರು. ಕಷ್ಟದ ಮೇಲೆ ಕಷ್ಟಕ್ಕೆ ಸಿಲುಕಿ ದಿಕ್ಕೆಟ್ಟವರಿರುವರು. ಅಂಥವರನ್ನು ಯಾವ ರೀತಿ ಸಂತೈಸಬಹುದು. ಯಾವ ರೀತಿ ಸಹಾಯ ಮಾಡಬೇಕೆಂಬ ಚಿಂತನೆ ಉಳ್ಳವರಾಗಿದ್ದರೆ ನಿಜವಾಗಿಯೂ ನೀವು ಭಾಗ್ಯವಂತರು. ಜಾರ್ಜ್‌ಮುಲ್ಲರ್, ಅನಾಥ ಮಕ್ಕಳ ಕುರಿತು ಅಕ್ಕರೆಯುಳ್ಳವರಾಗಿ ಸಾವಿರಾರು ಮಕ್ಕಳನ್ನು ಸಾಕಿ ಬೆಳೆಸಿದರು. ಮದರ್ ಥೆರೇಸಾರವರು ದಿಕ್ಕಿಲ್ಲದವರನ್ನು ಅನಾಥರನ್ನು, ಸಾಯುವ ಸ್ಥಿತಿಯಲ್ಲಿ ಕೈಬಿಡಲ್ಪಟ್ಟವರು ಇಂಥವರ ಮೇಲೆ ಕರುಣೆ ತೋರಿಸಿ, ದೈವೀಕ ಪ್ರೀತಿಯನ್ನು ತೋರಿಸಿ ಅಂಥವರ ಸೇವೆ ಮಾಡಿದರು. ಕ್ರಿಸ್ತನೂ ದಿಕ್ಕಿಲ್ಲದವರಿಗೆ ದರಿದ್ರರಿಗೆ ಸುವಾರ್ತೆಯನ್ನು ಸಾರಿದನು. ನಮಗೆ ಮಾದರಿಯಾದನು. ಕೆಲವರನ್ನು ವ್ಯಾಧಿ, ಸಂಕಷ್ಟಕ್ಕೆ ಒಳಪಡಿಸುವದು, ಕೆಲವರನ್ನು ಸಾಲದ ಸಮಸ್ಯೆ, ಸಂಕಷ್ಟಕ್ಕೆ ಒಳಪಡಿಸುವದು, ಕೆಲವರನ್ನು ದುಷ್ಟರು ಮನುಷ್ಯರ ಸಂಕಷ್ಟಕ್ಕೆ ಒಳಪಡಿಸುವರು ಎಲ್ಲಾ ಸಂಕಷ್ಟಗಳಿಗಿಂತ ಭಯಂಕರವಾದದ್ದು ಸೈತಾನನು ಜನರನ್ನು ಪಾಪಕ್ಕೆ ದಾಸರನ್ನಾಗಿಸಿ ಸಂಕಷ್ಟಕ್ಕೆ ಒಳಪಡಿಸಿ ನರಕಕ್ಕೆ ಎಳೆದುಕೊಂಡು ಹೋಗುವದೇ.

ದೇವಜನರೇ, ಅಂಥವರ ಮೇಲೆ ನೀವು ಕರುಣೆ ತೋರಿಸಿ ಅವರ ಆತ್ಮಗಳು ನರಕಕ್ಕೆ ಹೋಗದಂತೆ ಅವರಿಗೆ ಸುವಾರ್ತೆಯನ್ನು ಸಾರಿ ಪಾಪದ ದಾಸತ್ವದಿಂದ ಬಿಡುಗಡೆಗೊಳಿಸಿ. ಕರ್ತನ ಬಳಿಗೆ ತನ್ನಿರಿ. ದಿಕ್ಕೆಟ್ಟವರಿಗೆ ಕರುಣೆ ತೋರಿಸುವವರಿಗೆ ಕರ್ತನು ನೀಡುವ ಆಶೀರ್ವಾದ, 1. ಕೇಡುಗಳಿಂದ ತಪ್ಪಿಸುವನು, 2. ಅವರನ್ನು ರಕ್ಷಿಸುವನು, 3. ಭೂಮಿಯಲ್ಲಿ ಭಾಗ್ಯವಂತರಾಗಿರಿಸುವನು, 4. ಶತ್ರುಗಳಿಂದ ಅವರನ್ನು ತಪ್ಪಿಸುವನು.

*ನೆನಪಿಗೆ : "ಸೈತಾನನ ಕೆಲಸಗಳನ್ನು ಲಯಮಾಡುವದಕ್ಕೋಸ್ಕರವೇ ದೇವಕುಮಾರನು ಪ್ರತ್ಯಕ್ಷನಾದನು" (1 ಯೋಹಾ. 3:8).*



**ಫೆಬ್ರವರಿ 19**

## ವಿವೇಕದಿಂದ ಚಿಂತಿಸಿರಿ!

ಬೆಳಿಗ್ಗೆ : ಯಾಜಕ. 25
ಸಂಜೆ : ಮಾರ್ಕ. 1:21–45

"ಅವರು ಆಲೋಚನೆಯಿಲ್ಲದ ಜನರು; ಅವರಿಗೆ ಸ್ವಲ್ಪವಾದರೂ ವಿವೇಕವಿಲ್ಲ; ಅವರಿಗೆ ಜ್ಞಾನವಿದ್ದರೆ ಈ ಸಂಗತಿಗಳನ್ನೆಲ್ಲಾ ಗ್ರಹಿಸುತ್ತಿದ್ದರು" (ಧರ್ಮೋ. : 32:28,29).

ಕರ್ತನು ಈ ಮಾತುಗಳನ್ನು ಇಸ್ರಾಯೇಲ್ಯರನ್ನು ಕುರಿತು ಹೇಳಿದನು. ಹಾಗಾದರೆ ಇಸ್ರಾಯೇಲ್ಯರು ಮಾಡಿದ ತಪ್ಪೇನು? ಅವರು ತಮ್ಮ ಅಂತ್ಯವನ್ನು ಕುರಿತು ಯೋಚಿಸಲಿಲ್ಲ. ಈ ಪ್ರಪಂಚಕ್ಕಾಗಿಯೇ ಬದುಕಿದರು. ಕರ್ತನನ್ನು ಮೆಚ್ಚಿಸಲಿಲ್ಲ. ಅರಣ್ಯ ಪ್ರಯಾಣದಲ್ಲಿ ಕರ್ತನಿಗೆ ಕೋಪ ಎಬ್ಬಿಸುತ್ತಲೇ ಬಂದರು.

ಐಗುಪ್ತದೇಶದಿಂದ ಹೊರಗೆಬರುವಾಗ ಅವರು ಎಷ್ಟೊಂದು ಸಂತೋಷದಿಂದಿದ್ದರು! ಐಗುಪ್ತ್ಯರು ಇವರು ಕೇಳಿದ್ದನ್ನೆಲ್ಲಾ ಧಾರಾಳವಾಗಿ ಕೊಟ್ಟುಬಿಟ್ಟರು. ಹೇರಳವಾದ ಒಡವೆ ವಸ್ತ್ರಗಳು, ಆಹಾರ ಧಾನ್ಯ, ದನ ಕುರಿಗಳೊಂದಿಗೆ ಹೊರಟರು. ಇಸ್ರಾಯೇಲ್ಯರ ಮನೆಗಳೆಲ್ಲಾ ಪಸ್ಕದ ಕುರಿಯ ರಕ್ತದೊಳಗೆ ರಕ್ಷಿಸಲ್ಪಟ್ಟಿರುವಾಗ, ಐಗುಪ್ತದ ಚೊಚ್ಚಲು ಮಕ್ಕಳು, ಪ್ರಾಣಿಗಳು ಸಂಹರಿಸಲ್ಪಟ್ಟವು. ಮೋಶೆ ಕೆಂಪು ಸಮುದ್ರದ ದಂಡೆಯಲ್ಲಿ ನಿಂತು ತನ್ನ ಕೋಲನ್ನು ಚಾಚಿದಾಗ ಸಮುದ್ರ ಇಬ್ಭಾಗವಾಗಿ ಇಸ್ರಾಯೇಲ್ಯರು ಒಣಭೂಮಿಯಲ್ಲಿ ನಡೆದು ಸಮುದ್ರದ ಮತ್ತೊಂದು ದಂಡೆ ಸೇರಿದರು. ಆದರೆ ಫರೋಹನನು ಅವನ ಸೈನ್ಯವೂ ಸಮುದ್ರದಲ್ಲಿ ಮುಳುಗಿಹೋದರು. ಆಗ ಇಸ್ರಾಯೇಲ್ಯರು ಹಾಡಿ ಕುಣಿದಾಡಿದರು. ಕರ್ತನು ಅರಣ್ಯದಲ್ಲಿ ಅನೇಕ ಅದ್ಭುತಗಳನ್ನು ಮಾಡಿದನು. ಇಸ್ರಾಯೇಲ್ಯರನ್ನು ಮಾರ್ಗ ನಡಿಸಲು ಮೇಘಸ್ತಂಭ, ಅಗ್ನಿಸ್ತಂಭಗಳನ್ನು ಇಟ್ಟನು. ದೇವದೂತರ ಆಹಾರಮನ್ನವನ್ನು ಅವರು ತಿಂದರು. ದಾಹಗೊಂಡಾಗ ಬಂಡೆಯಿಂದ ಹೊರಟ ನೀರನ್ನು ಕುಡಿದರು. ಹಾಗಿದ್ದರೂ ಅವರು ಕರ್ತನನ್ನು ಪ್ರೀತಿಸಲಿಲ್ಲ. ಆತನಿಗೆ ವಿರೋಧವಾಗಿ ಗುಣುಗುಟ್ಟುತ್ತಲೇ ಇದ್ದರು. ಆದ್ದರಿಂದಲೇ ಅವರು ದೇವರ ಕೋಪಕ್ಕೆ ಒಳಗಾಗಬೇಕಾಯಿತು. ಅವರಲ್ಲಿ ಕೆಲವರು ಜಾರತ್ವ ನಡೆಸಿ ಒಂದೇ ದಿನದಲ್ಲಿ ಇಪ್ಪತ್ತು ಮೂರು ಸಾವಿರ ಮಂದಿ ಸತ್ತರು. ನಾವು ಜಾರತ್ವ ಮಾಡದೆ ಇರೋಣ. ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ. ಮತ್ತು ಯುಗಾಂತ್ಯಕ್ಕೆ ಬಂದಿರುವ ನಮಗೆ ಬುದ್ಧಿವಾದಗಳಾಗಿವೆ" (1 ಕೊರಿಂ. 10:8,11) ಎಂದು ಸತ್ಯವೇದ ನಮ್ಮನ್ನು ಎಚ್ಚರಿಸುತ್ತದೆ.

ದೇವಜನರೇ, ಐಗುಪ್ತದಿಂದ ಹೊರಟ ಸುಮಾರು ಎರಡು ಲಕ್ಷ ಜನರಲ್ಲಿ ಇಬ್ಬರು ಮಾತ್ರ ಕಾನಾನನ್ನು ಪ್ರವೇಶಿಸಿದರು. ಅವರೇ ಕಾಲೇಬ, ಯೆಹೋಶುವ. ಯೆಹೋಶುವನಂತೆ, ಕಾಲೇಬನಂತೆ ಕರ್ತನನ್ನು ಹಿಂಬಾಲಿಸಿರಿ. ಆತನ ಆಜ್ಞೆಗಳನ್ನು ಕೈಕೊಂಡು ನಡೆಯಿರಿ. ಆಗ ನಿಮ್ಮ ಅಂತ್ಯ ಮಹಿಮೆಯಿಂದ ಕೂಡಿದ್ದಾಗಿರುವದು.

*ನೆನಪಿಗೆ : "ಬಹು ಹೆಚ್ಚಾಗಿ ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ" (ಫಿಲಿಪ್ಪಿ. 2:12).*

ಫೆಬ್ರವರಿ 20

## ಸಮಾಧಾನದ ಮನಸ್ಸು!

ಬೆಳಿಗ್ಗೆ : ಯಾಜಕ. 26, 27
ಸಂಜೆ : ಮಾರ್ಕ. 2

ಒಂದೇ ಮನಸ್ಸುಳ್ಳವರಾಗಿರಿ; ಸಮಾಧಾನದಿಂದಿರಿ, ಆಗ ಪ್ರೀತಿಯನ್ನೂ ಶಾಂತಿಯನ್ನೂ ಕೊಡುವ ದೇವರು ನಿಮ್ಮ ಸಂಗಡ ಇರುವನು (2 ಕೊರಿಂ. 13:11).

ನಿಜವಾದ ಸಮಾಧಾನ ಪಡೆಯುವದು ಹೇಗೆ? ಸಮಾಧಾನ ಕೊಡುವದು ಸಮಾಧಾನದ ಪ್ರಭುವಾದ ಕ್ರಿಸ್ತನೂ, ಪವಿತ್ರನು. ಆದರೆ ಸಮಾಧಾನವನ್ನು ಕೆಡಿಸುವದು, ಸೈತಾನನು ಅವನು ತೋರಿಸುವ ಪಾಪಭೋಗಗಳೇ. ನಿಮಗೆ ಸಮಾಧಾನ ನೀಡುವದಕ್ಕಾಗಿಯೇ, ಕರ್ತನು ಸೈತಾನನ ತಲೆಯನ್ನು ಜಜ್ಜಿ, ಶಿಲುಬೆಯಲ್ಲಿ ಜಯಗಳಿಸಿದನು. ಆತನು ಸಮಾಧಾನ ಕರ್ತನು (ಆದಿ. 49:10). ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ (1 ಕೊರಿಂ. 14:33).

ಸೈತಾನನು ನಿಮ್ಮ ಮನೆಯಲ್ಲಿ ನುಸುಳದಂತೆ, ಕುಟುಂಬ ಸಮಾಧಾನವನ್ನು ಕಾಪಾಡಿಕೊಳ್ಳಿರಿ. ಬೇಧಗಳು, ಕಹಿಯ ಭಾವನೆಗಳು, ಕ್ಷಮಿಸದ ಗುಣಗಳು ಸೈತಾನನಿಗೆ ಬಾಗಿಲನ್ನು ತೆರೆದುಕೊಡುತ್ತದೆ. ದುಷ್ಟರಿಗೆ ಸಮಾಧಾನವೇ ಇಲ್ಲ (ಯೆಶಾ. 48:22, 57:21) ಎಂದು ಸತ್ಯವೇದ ಹೇಳುತ್ತದೆ. ಕುಟುಂಬದಲ್ಲಿ ಒಮ್ಮನಸ್ಸಿನಿಂದ ಇದ್ದು, ಸೈತಾನನನ್ನು ಎದುರಿಸಿ ನಿಲ್ಲಿರಿ. “ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ” (ಕೀರ್ತ. 133:1,3) ಎಂದು ಕೀರ್ತನೆಗಾರನು ಬರೆಯುತ್ತಾನೆ. “ಈ ಒಂದು ವಚನದಲ್ಲಿಯೇ ಎಂದೆಂದಿಗೂ ಆಶೀರ್ವಾದ, ಎಂದೆಂದಿಗೂ ಜೀವ” ಎಂದು ಓದುತ್ತೇವೆ. ಮಾತ್ರವಲ್ಲ ಎಂದೆಂದಿಗೂ ಸಮಾಧಾನವನ್ನು ಯೆಹೋವನು ಆಜ್ಞಾಪಿಸುತ್ತಾನೆ. ಒಂದು ಕೋಲನ್ನು ಮುರಿದುಬಿಡಬಹುದು. ಆದರೆ ಮೂರು ನಾಲ್ಕು ಕೋಲುಗಳನ್ನು ಸೇರಿಸಿ ಮುರಿಯಲು ಸಾಧ್ಯವಿಲ್ಲ. ನೀವು ಕುಟುಂಬದಲ್ಲಿ ಒಮ್ಮನಸ್ಸಿನಿಂದ ಇರುವದಾದರೆ ಕುಟುಂಬಕ್ಕೆ ವಿರೋಧವಾಗಿ ಬರುವ ಎಲ್ಲಾ ಶತ್ರುವಿನ ದುಷ್ಟ ಆಲೋಚನೆಗಳನ್ನು, ಅಂಧಕಾರ ಶಕ್ತಿಗಳನ್ನು, ಮಾಟ ಮಂತ್ರಗಳನ್ನು, ಸೈತಾನನ ತಂತ್ರಗಳನ್ನು ಸುಲಭವಾಗಿ ಮುರಿದುಹಾಕಲ್ಪಡಲು ಸಾಧ್ಯ.

ದೇವಮಕ್ಕಳೇ, ನೂರಿಪ್ಪತ್ತು ಜನರು ಒಂದು ಮನಸ್ಸುಳ್ಳವರಾಗಿ ಮೇಲುಪ್ಪರಿಗೆಯಲ್ಲಿ ಪ್ರಾರ್ಥಿಸಿದಾಗ, ಸಮಾಧಾನಕರ್ತೃವಾದ ಪವಿತ್ರಾತ್ಮನು ಅವರ ಮೇಲೆ ಇಳಿದು ಬಂದನು (ಅ.ಕೃ.2:1–4). ಪ್ರಿಯರೇ, ಕುಟುಂಬವಾಗಿ ಒಮ್ಮನಸ್ಸಿನಿಂದ ಪ್ರಾರ್ಥಿಸಿರಿ. ದೇವಬಲದಿಂದ ತುಂಬಿದವರಾಗಿ ಶತ್ರುವನ್ನು ಎದುರಿಸಿ ನಿಲ್ಲಿರಿ. ಪವಿತ್ರತೆಯಲ್ಲಿ ಮುಂದೆ ನಡೆಯಿರಿ.

*ನೆನಪಿಗೆ : ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸುಕ್ರಿಸ್ತನ ಸಂಗಡಲೂ ಇರುವದು (1 ಯೋಹಾ. 1:3).*



ಫೆಬ್ರವರಿ 21

## ಮನಸ್ಸು ಮಾರ್ಪಡಲಿ!

ಬೆಳಿಗ್ಗೆ : ಅರಣ್ಯ 1, 2
ಸಂಜೆ : ಮಾರ್ಕ. 3:1–19

“ಎಲೌ ಕುಮಾರಿಯೇ, ನನ್ನ ಮಾತನ್ನು ಕೇಳಿ ಆಲೋಚಿಸು; ಸ್ವಜನರನ್ನೂ, ತವರುಮನೆಯನ್ನೂ ಮರೆತುಬಿಡು. ಆಗ ರಾಜನು ನಿನ್ನ ಲಾವಣ್ಯವನ್ನು ನೋಡಲಪೇಕ್ಷಿಸುವನು. ಆತನೇ ನಿನಗೆ ಒಡೆಯನು, ಆತನಿಗೆ ನಮಸ್ಕರಿಸು” (ಕೀರ್ತ. 45:10,11).

ಒಮ್ಮೆ ಒಬ್ಬ ಯುವರಾಜನು ತನ್ನ ದೇಶದ ಪ್ರಜೆಗಳನ್ನು ನೋಡಲಪೇಕ್ಷಿಸಿ ತನ್ನ ಪಲ್ಲಕ್ಕಿಯಲ್ಲಿ ಕುಳಿತು ಸವಾರಿ ಹೊರಟನು. ಮೊದಲೇ ಸೈನಿಕರು ಬೀದಿಗಳನ್ನೆಲ್ಲಾ ಚೊಕ್ಕ ಪಡಿಸಿ ಯುವರಾಜನ ಆಗಮನಕ್ಕೆ ಕಾಯುತ್ತಿದ್ದರು. ಒಬ್ಬ ಬಡ ಹೆಣ್ಣುಮಗಳು ರಾಜಕುಮಾರನನ್ನು ನೋಡಲಪೇಕ್ಷಿಸಿ ಒಂದು ಬೀದಿಯ ಪಕ್ಕದಲ್ಲಿ ನಿಂತಿದ್ದಳು. ಅವಳನ್ನು ಕಂಡ ಸೈನಿಕರು ಅವಳನ್ನು ಗದರಿಸಿ ಅಲ್ಲಿಂದ ಓಡಿಸಿದರು. ಅವಳು ದೂರದಲ್ಲಿದ್ದ ಒಂದು ಮರದ ಕೆಳಗೆ ರಾಜ ಕುಮಾರನ ಬರುವಿಕೆಗಾಗಿ ಕಾದುನಿಂತಿದ್ದಳು. ಯುವರಾಜನು ಆ ಸ್ಥಳಕ್ಕೆ ಬಂದಾಗ ಅವನ ಕಣ್ಣುಗಳು ದೂರದಲ್ಲಿ ನಿಂತಿದ್ದ ಆ ಹೆಣ್ಣುಮಗಳನ್ನು ಕಂಡಿತು. ಕೂಡಲೆ ಅಲ್ಲಿದ್ದ ಸೈನಿಕರಿಗೆ ಅವಳನ್ನು ಕರೆತರುವಂತೆ ಅಪ್ಪಣೆ ಕೊಟ್ಟನು. ಅವಳನ್ನು ಓಡಿಸಿಬಿಟ್ಟಿದ್ದ ಸೈನಿಕರು ಗೌರವದಿಂದ ಯುವರಾಜನ ಬಳಿಗೆ ಕರೆತಂದರು. ಅವನು ಅವಳನ್ನು ತನ್ನ ಪಟ್ಟದರಸಿಯಾಗಿ ಸ್ವೀಕರಿಸಿದನು.

ಹಳೆ ಒಡಂಬಡಿಕೆಯಲ್ಲಿ ರೂತಳು ಒಬ್ಬ ಬಡ ಹೆಣ್ಣು. ಪರದೇಶಿಯಂತೆ ಬೋವಜನ ಹೊಲದಲ್ಲಿ ಹಕ್ಕಲಾಯುತ್ತಿದ್ದಳು. ಆದರೆ ಕರ್ತನು ಅವಳನ್ನು ಪ್ರೀತಿಸಿದ್ದರಿಂದ ಐಶ್ವರ್ಯವಂತನಾದ ಬೋವಜನ ಮದುವಣಗಿತ್ತಿಯಾಗಿ ಅವಳನ್ನು ಮೇಲಕ್ಕೆ ಎತ್ತಿದನು. ಅವಳ ಅತ್ತೆ ನೊವೊಮಿ ಅವಳ ಕುರಿತಾಗಿ ಬಹಳ ಅಕ್ಕರೆಯುಳ್ಳವಳಾಗಿದ್ದಳು. ಸೊಸೆಗೆ ಅವಳು – “ನನ್ನ ಮಗಳೇ, ನೀನು ಗೃಹಿಣಿಯಾಗಿ ಸುಖದಿಂದಿರುವದಕ್ಕೋಸ್ಕರ ನಾನು ಪ್ರಯತ್ನಿಸಬೇಕಲ್ಲವೇ?” (ರೂತ. 3:1) ಎಂದು ಹೇಳುತ್ತಾಳೆ. ರೂತಳ ಭವಿಷ್ಯದ ಮೇಲೆ ನೊವೊಮಿಗೆ ಬಹಳ ಕಾಳಜಿ ಇತ್ತು. ಬೋವಜನು ಕ್ರಿಸ್ತನಿಗೆ ಗುರುತಾಗಿರುವನು. ರೂತಳು ಸಭೆಗೆ ಗುರುತಾಗಿರುವಳು. ನೊವೊಮಿಯು ಒಳ್ಳೆಯ ಆಲೋಚನೆ ಕೊಟ್ಟು ನಡೆಸುವ ಪವಿತ್ರಾತ್ಮನಿಗೆ ಗುರುತಾಗಿರುವಳು. ಕ್ರಿಸ್ತನು ತನ್ನ ಸಭೆಯನ್ನು ತನಗೆ ಮದುವಣಗಿತ್ತಿಯಾಗಬೇಕೆಂದು ಬಯಸುತ್ತಾನೆ. ಪವಿತ್ರಾತ್ಮನು ಸಭೆಯಾದ ನಿಮ್ಮನ್ನು ಸುಕ್ಕೂ ಕಳಂಕವೂ ಇಲ್ಲದ ಮದುವಣಗಿತ್ತಿಯಾಗಿ ಕ್ರಿಸ್ತನ ಮುಂದೆ ನಿಲ್ಲಿಸಲು ಉತ್ತಮ ಆಲೋಚನೆ ಕೊಡುವ ಕರ್ತನಾಗಿರುವನು.

ದೇವಜನರೇ, ಕರ್ತನ ಪ್ರೀತಿಯನ್ನು ಧ್ಯಾನಿಸಿರಿ. ಆತನ ಪ್ರೀತಿಗೆ ಬಾಧ್ಯರಾಗುವಂತೆ ಕಳಂಕ ರಹಿತವಾಗಿ ಜೀವಿಸಿರಿ. ಅಂತಃಪುರದಲ್ಲಿ ರಾಜಕುಮಾರಿಯು ಎಷ್ಟೋ ವೈಭವದಿಂದಿದ್ದಾಳೆ. ಆಕೆಯು ಜರತಾರಿಯ ವಸ್ತ್ರವನ್ನು ಧರಿಸಿಕೊಂಡಿದ್ದಾಳೆ (ಕೀರ್ತ. 45:13).

*ನೆನಪಿಗೆ : “ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರುಮಡಿ ಅಂದರೆ ದೇವಜನರ ಸತ್ಕಾರ್ಯಗಳೇ” (ಪ್ರಕ.19:8).*

ಫೆಬ್ರವರಿ 22

## ಮನಸ್ಸಿನಂತೆ ಜೀವಿತ!

ಬೆಳಿಗ್ಗೆ : ಅರಣ್ಯ 3, 4
ಸಂಜೆ : ಮಾರ್ಕ. 3:20–35

"ಆತನ ನ್ಯಾಯಕ್ರಮದಲ್ಲಿ ಎಲ್ಲಾ ಕೆಲಸಕಾರ್ಯಗಳಿಗೂ ತಕ್ಕ ಸಮಯವುಂಟು" (ಪ್ರಸಂಗಿ 3:17).

ಒಬ್ಬ ಮನುಷ್ಯನ ಮನಸ್ಸು, ಮಾತು, ಕಾರ್ಯ ಈ ಮೂರು ಅವನ ಜೀವಿತವನ್ನು ನಿರ್ಣಯಿಸುವದು. ಅವನ ಅಂತರಂಗದ ಆಲೋಚನೆ ಹೇಗೋ ಹಾಗೆಯೇ ಅವನು ಇರುವನು (ಜ್ಞಾನೋ. 23:7). ಬೇರು ಪರಿಶುದ್ಧವಾಗಿದ್ದರೆ, ಕೊಂಬೆಗಳು ಪರಿಶುದ್ಧವಾಗಿರುವದು. ಕೊಂಬೆಗಳು ಪರಿಶುದ್ಧವಾಗಿದ್ದರೆ ಹೂವು, ಕಾಯಿ, ಹಣ್ಣುಗಳೂ ಪರಿಶುದ್ಧವಾಗಿರುವದು. ಮನಸ್ಸಿನ ಆಲೋಚನೆಗಳು, ಮಾತುಗಳಾಗಿ ಹೊರಬರುತ್ತದೆ. ನಂತರ ಮಾತುಗಳು ಕಾರ್ಯರೂಪದಲ್ಲಿ ಮಾರ್ಪಡುವದು. ಆದ್ದರಿಂದ ನೀವು ನಿಮ್ಮ ಆಲೋಚನೆಗಳಲ್ಲಿ ಜಾಗ್ರತೆಯುಳ್ಳವರಾಗಿರಬೇಕು. ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯಬೇಕು (2 ಕೊರಿಂ. 10:5) ಎಂದು ಅಪೊ. ಪೌಲನು ಹೇಳುತ್ತಾನೆ.

ಹಳೆಯ ಒಡಂಬಡಿಕೆಯಲ್ಲಿ ಕಾರ್ಯಗಳಿಗೂ, ನ್ಯಾಯತೀರ್ಪಾಗುತ್ತಿತ್ತು. ಇಸ್ರಾಯೇಲ್ಯರು ನೀತಿಯ ಕಾರ್ಯಗಳನ್ನು ಕೈಗೊಳ್ಳಬೇಕೆಂದೇ ಕರ್ತನು ದಶಾಜ್ಞೆಗಳನ್ನು ನೀಡಿದನು. ಆದರೆ ಹೊಸ ಒಡಂಬಡಿಕೆಗೆ ಬರುವಾಗ ಈ ಕಾರ್ಯಗಳ ಉಗಮ ಸ್ಥಾನವಾದ ಮನಸ್ಸು ಅಥವಾ ಆಲೋಚನೆಗಳೂ ನ್ಯಾಯತೀರ್ಪಿಗೆ ಒಳಪಡಬೇಕಾಗಿರುವದು. ಸಕಲ ಆಲೋಚನೆಗಳನ್ನೂ, ಸಕಲ ಕಾರ್ಯಗಳನ್ನೂ ಕರ್ತನು ನ್ಯಾಯತೀರ್ಪಿಗೆ ಒಳಪಡಿಸುವನು. ವ್ಯಭಿಚಾರ ಮಾಡಬಾರದು ಎಂಬುದು ಹಳೆಯ ಒಡಂಬಡಿಕೆಯ ಆಜ್ಞೆ. ಆದರೆ ಹೊಸ ಒಡಂಬಡಿಕೆಯಲ್ಲಿ ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನೂ ಆಗಲೇ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು (ಮತ್ತಾ. 5:27,28). ನರಹತ್ಯ ಮಾಡಬಾರದೆಂಬುದು ಹಳೆಯ ಒಡಂಬಡಿಕೆ. ಆಜ್ಞೆ, ಆದರೆ ಹೊಸ ಒಡಂಬಡಿಕೆಯಲ್ಲಿ ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವವನು ತನ್ನ ಸಹೋದರನನ್ನು ನೋಡಿ "ಛೀ ನೀಚಾ" ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗುವನು. ಮೂರ್ಖ ಅನ್ನುವವನು ಅಗ್ನಿ ನರಕಕ್ಕೆ ಗುರಿಯಾಗುವನು ಎಂದು ಬರೆದಿದೆ (ಮತ್ತಾ. 5:21,22). ಅನೇಕರು ಮನಸ್ಸಿನಲ್ಲೇ ಪಾಪಭೋಗಗಳನ್ನು ಕಲ್ಪಿಸಿಕೊಂಡು ನೋಡುವರು. ನಂತರ ಅದನ್ನೇ ಚಿಂತಿಸಿ ಅದು ಕಾರ್ಯರೂಪವಾಗಿ ಹೊರಬಿದ್ದು ಪಾಪದಲ್ಲಿ ಸಿಕ್ಕಿಕೊಳ್ಳುವರು.

ದೇವಜನರೇ, ನಿಮ್ಮ ಮನಸ್ಸಿನಲ್ಲಿ ಏಳುವ ಆಲೋಚನೆಗಳ ಕುರಿತು ಎಚ್ಚರಿಕೆಯಾಗಿರಬೇಕು. ಬೇಡದ ಆಲೋಚನೆಗಳು ಬರುವಾಗ ಪ್ರಾರಂಭದಲ್ಲಿಯೇ ಚಿವುಟಿಹಾಕಿರಿ.

*ನೆನಪಿಗೆ : "ಜ್ಞಾನಿಗಳ ಯೋಚನೆಗಳು ನಿಷ್ಫಲವಾದವುಗಳೆಂದು ಕರ್ತನು ತಿಳಿದುಕೊಳ್ಳುತ್ತಾನೆಂತಲೂ ಬರೆದಿದೆಯಲ್ಲಾ" (1 ಕೊರಿಂ. 3:20).*



ಫೆಬ್ರವರಿ 23

## ಕ್ಷಮಿಸುವ ಮನಸ್ಸು!

ಬೆಳಿಗ್ಗೆ : ಅರಣ್ಯ 5, 6
ಸಂಜೆ : ಮಾರ್ಕ. 4:1–20

"ಏಳು ಸಾರಿ ಎಂದಲ್ಲ ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ" (ಮತ್ತಾ. 18:22).

ಒಬ್ಬ ಮನುಷ್ಯನಿಗೆ "ಕ್ಷಮಿಸುವ ಮನಸ್ಸು" ಅತಿ ಮುಖ್ಯವಾದದ್ದು. ಹಾಗೂ ವಿಶೇಷವಾದ ಗುಣ ಅದಾಗಿದೆ. ಅದು ದೈವೀಕವಾದ ಗುಣ. ನಿಮಗೆ ವಿರೋಧವಾಗಿ ತಪ್ಪು ಮಾಡಿದವರನ್ನು ನೀವು ಮನಃಪೂರ್ವಕವಾಗಿ ಕ್ಷಮಿಸುವಾಗ ನಿಮ್ಮ ತಪ್ಪುಗಳನ್ನು ಕರ್ತನು ಮನಸಾರೆ ಕ್ಷಮಿಸುವನು. ಮಾತ್ರವಲ್ಲ, ಯಾವೊಬ್ಬ ಮನುಷ್ಯನು ತನ್ನ ಸಹೋದರನನ್ನು ಕ್ಷಮಿಸಿ, ಅವನೊಂದಿಗೆ ಸಂಧಾನ ಮಾಡಿಕೊಳ್ಳುವನೋ ಅದರ ಮೂಲಕ ಪ್ರೀತಿಯ ಅನ್ಯೋನ್ಯತೆ ಏರ್ಪಡುವದು. ಮಾನವನಿಗೆ ಪಾಪಕ್ಷಮಾಪಣೆ ನೀಡುವದಕ್ಕಾಗಿ ಪರಲೋಕದಲ್ಲಿ ದೇವಕುಮಾರನಾಗಿದ್ದಾತನು, ದಾಸನ ರೂಪ ಧರಿಸಿ ಮನುಷ್ಯ ಸದೃಷನಾಗಿ ಮಾರ್ಪಟ್ಟನಲ್ಲವೇ?

ಕರ್ತನಾದ ಯೇಸುಕ್ರಿಸ್ತನು ತನ್ನ ಪರ್ವತ ಪ್ರಸಂಗದ ಪ್ರಾರಂಭದಿಂದ ಶಿಲುಬೆಯ ಪರಿಯಂತ, ಕ್ಷಮಾಪಣೆಯ ಕುರಿತೇ ಬೋಧಿಸಿದನು. ಆತನು ತನ್ನ ಶಿಷ್ಯರಿಗೆ ಕಲಿಸಿಕೊಟ್ಟ ಪ್ರಾರ್ಥನೆಯಲ್ಲಿ "ನಾವು ಇತರರನ್ನು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು" ಎಂದು ಹೇಳಿಕೊಟ್ಟನು. ಕ್ರಿಸ್ತನ ಮನಸ್ಸೆಲ್ಲಾ ಕ್ಷಮಾಭಾವದಿಂದ ತುಂಬಿತ್ತು. ಕಲ್ವಾರಿ ಶಿಲುಬೆಯಲ್ಲಿ ತೂಗಿದ ಆ ಆರುಗಂಟೆಗಳು ತಡೆಯಲಾಗದ ಬಾಧೆಯನ್ನು ಸಹಿಸಿಕೊಂಡು "ತಂದೆಯೇ ಅವರನ್ನು ಕ್ಷಮಿಸು ತಾವು ಮಾಡುವದೇನೆಂದು ಅರಿಯರು" ಎಂದು ತನ್ನನ್ನು ಹಿಂಸಿಸುವವರಿಗಾಗಿ ಬೇಡಿದನು. ಸತ್ಯವೇದದಲ್ಲಿ ಸ್ತೆಫನನೆಂಬ ಭಕ್ತನನ್ನು ನೋಡುತ್ತೇವೆ. ಆತನು ಕ್ರಿಸ್ತೇಸುವಿನಲ್ಲಿದ್ದ ಕ್ಷಮಿಸುವ ಗುಣವನ್ನು ಧರಿಸಿದವನಾಗಿದ್ದನು. ಅವನನ್ನು ಕೊಲ್ಲಲು ಯೆಹೂದ್ಯರು ಕಲ್ಲುಗಳನ್ನು ತೆಗೆದುಕೊಂಡಾಗ, ಆತನು ಎರಡು ಕಾರ್ಯಗಳನ್ನು ಮಾಡಿದನು. ಮೊದಲನೆಯದಾಗಿ ಮೊಳಕಾಲೂರಿದನು, ಎರಡನೆಯದಾಗಿ "ದೇವರೇ, ಇವರ ಮೇಲೆ ಈ ಪಾಪವನ್ನು ಹೊರಿಸಬೇಡ" ಎಂದು ಗಟ್ಟಿಯಾಗಿ ಪ್ರಾರ್ಥಿಸಿದನು (ಅ.ಕೃ. 7:60). ನಂತರ ಅವನನ್ನು ಕಲ್ಲೆಸೆದು ಕೊಂದರು. ಮೇಲುಪ್ಪರಿಗೆಯಲ್ಲಿ ಆದಿ ಸಭೆಯ 120 ಜನರು ಒಬ್ಬರನ್ನೊಬ್ಬರು ಕ್ಷಮಿಸಿ, ಅನ್ಯೋನ್ಯತೆಯಿಂದ ಕೂಡಿದವರಾಗಿದ್ದದರಿಂದ ಆಸಕ್ತಿಯಿಂದ ಪ್ರಾರ್ಥಿಸಲು ಅವರಿಂದ ಸಾಧ್ಯವಾಯಿತು.

ದೇವಜನರೇ, ಕ್ರಿಸ್ತನ ಹೆಜ್ಜೆಯ ಜಾಡನ್ನು ದೇವಭಕ್ತರ ಜೀವನ ಚರಿತ್ರೆಯನ್ನು ಧ್ಯಾನಿಸಿರಿ. ನಿಮಗೆ ವಿರೋಧವಾಗಿ ತಪ್ಪು ಮಾಡಿದವರನ್ನು ಏಳು ಸಾರಿ ಅಲ್ಲ, ಏಳೆಪ್ಪತ್ತುಸಾರಿ ಕ್ಷಮಿಸಿರಿ. ಗಂಡ ಹೆಂಡತಿ ನಡುವೆ ಕಹಿಯ ಭಾವನೆಗಳನ್ನು ಬೆಳೆಸಬೇಡಿರಿ. ಅಗಲಿಕೆಗೆ ಸ್ಥಳ ಕೊಡದಿರಿ. ದೈವೀಕ ಪ್ರೀತಿ ಇತರರ ತಪ್ಪುಗಳನ್ನು ಮರೆಸುವಂತೆ ಪ್ರೇರೇಪಿಸಲಿ.

*ನೆನಪಿಗೆ : "ತನ್ನಲ್ಲಿ ಬೇಧ ಹುಟ್ಟಿದ ರಾಜ್ಯವು ಹಾಳಾಗುತ್ತದೆ ಮತ್ತು ತನ್ನಲ್ಲಿ ಬೇಧ ಹುಟ್ಟಿದ ಮನೆ ಬೀಳುತ್ತದೆ" (ಲೂಕ. 11:17).*

ಫೆಬ್ರವರಿ 24

## ಯೋಚಿಸಿದಳು!

ಬೆಳಿಗ್ಗೆ : ಅರಣ್ಯ 7, 8
ಸಂಜೆ : ಮಾರ್ಕ. 4:21–41

"ಮರಿಯಳು ಆ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸುತ್ತಿದ್ದಳು" (ಲೂಕ. 2:19).

ಯೋಚಿಸಿ, ಕಾರ್ಯ ನಡೆಸುವವನು ಜ್ಞಾನಿಯಾಗಿದ್ದಾನೆ. ಯೋಚಿಸದೆ ಭಾವುಕತೆಗೆ ಒಳಗಾಗಿ ಮಾತನಾಡಿ ಅವಸರದಿಂದ ಕಾರ್ಯವೆಸಗಿ ನಂತರ ವ್ಯಥೆಪಡುವದು ಮೂರ್ಖತನ. ಆದ್ದರಿಂದ ಸರಿಯಾಗಿ ಯೋಚಿಸಿ ಕಾರ್ಯಪ್ರವೃತ್ತರಾಗಿರಿ. ದೇವರ ಚಿತ್ತಕ್ಕೆ ಸರಿಯಾದ ಆಲೋಚನೆಗಳನ್ನು ನೀಡುವಂತೆ ಆತನಲ್ಲಿ ಪ್ರಾರ್ಥಿಸಿರಿ. ದೇವರೇ, ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುವವನಾಗಿದ್ದಾನೆ (ಫಿಲಿ. 2:13).

ಯೇಸುಕ್ರಿಸ್ತನ ತಾಯಿಯಾದ ಮರಿಯಳ ಜೀವಿತವನ್ನು ನೋಡಿರಿ. ಅವಳು ಕುರುಬರು, ಶಿಶುವಾದ ಯೇಸುವಿನ ಕುರಿತಾಗಿ ದೇವದೂತರು ತಮಗೆ ಹೇಳಿದ ಮಾತುಗಳನ್ನು ಮತ್ತು ಯೋಸೇಫ ಮರಿಯಳು ಆ ಮಗುವನ್ನು ದೇವಾಲಯಕ್ಕೆ ತೆಗೆದುಕೊಂಡು ಹೋದಾಗ, ಸೀಮೋನನೆಂಬ ಮನುಷ್ಯನು ಹೇಳಿದ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸಿದಳು ಎಂದು ಲೂಕ. 2:19ರಲ್ಲಿ ಬರೆಯಲ್ಪಟ್ಟಿದೆ. ನಂತರ ಕಾನಾ ಊರಿನ ಮದುವೆಯ ಮನೆಯಲ್ಲಿ ಸೇವಕರಿಗೆ "ಆತನು ಏನು ಹೇಳುವನೋ ಅದರಂತೆ ಮಾಡಿರಿ" ಎಂದು ಹೇಳಿದಳು. ತನ್ನ ಮಗನಾದ ಯೇಸುವಿನ ಮಹತ್ವವನ್ನು ಆಕೆ ಅರಿತಿದ್ದಳು. ಆದ್ದರಿಂದಲೇ ಹಾಗೆ ಹೇಳಿದಳು. ಅವಳು ಯಾವತ್ತೂ ವ್ಯರ್ಥವಾದ ಮಾತುಗಳನ್ನಾಡಲಿಲ್ಲ. ಆಕೆಯ ಜೀವಿತ ನಮ್ಮೆಲ್ಲರಿಗೂ ಮಾದರಿಯಾಗಿರುವದು. ಬಹಳ ದುಃಖದಲ್ಲಿರುವಾಗ, ಬಹಳ ಸಂತೋಷದಲ್ಲಿರುವಾಗ ಯಾವ ತೀರ್ಮಾನಕ್ಕೂ ಬರಬೇಡಿ. ಭಾವೋದ್ರೇಕಗಳಿಗೆ ಒಳಗಾಗಿ ಯಾವ ಕಾರ್ಯವನ್ನೂ ಮಾಡಬೇಡಿ. ಎಲ್ಲವನ್ನೂ ನಿಧಾನವಾಗಿ ಯೋಚಿಸಿ ಕಾರ್ಯ ನಡೆಸಿರಿ.

ದೇವಮಕ್ಕಳೇ, ಯಾವದೇ ಕಾರ್ಯಗಳನ್ನು ಮಾಡುವ ಮೊದಲು ನಿರ್ಧಾರಗಳನ್ನು ತೆಗೆದುಕೊಳ್ಳುವ ಮೊದಲು ದೇವರ ಸಮ್ಮುಖದಲ್ಲಿಟ್ಟು ಯೋಚಿಸಿರಿ. ಕರ್ತನ ಬಳಿ ಆಲೋಚಿಸಿ ಕೇಳಿರಿ. ಆತನು ನಿಮ್ಮನ್ನು ಉತ್ತಮವಾದ ಮಾರ್ಗದಲ್ಲಿ ನಡೆಸಿ ನಿಮ್ಮ ಕಾರ್ಯಗಳನ್ನು ಸಫಲಪಡಿಸುವನು.

*ನೆನಪಿಗೆ : "ಕುಯುಕ್ತಿಯುಳ್ಳವರು ದಾರಿತಪ್ಪಿದವರೇ ಸರಿ; ಸುಯುಕ್ತಿಯುಳ್ಳವರು ಪ್ರೀತಿಸತ್ಯತೆಗಳಿಗೆ ಪಾತ್ರರು" (ಜ್ಞಾನೋಕ್ತಿ. 14:22).*



ಫೆಬ್ರವರಿ 25

## ಅಕ್ರಮ ಯೋಚನೆ!

ಬೆಳಿಗ್ಗೆ : ಅರಣ್ಯ 9, 10, 11
ಸಂಜೆ : ಮಾರ್ಕ. 5:1–20

"ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ" (ಕೀರ್ತ. 66:18).

ದೇವರು ಎಲ್ಲವನ್ನೂ ಸುವ್ಯವಸ್ಥಿತವಾಗಿ ಕ್ರಮಬದ್ಧವಾಗಿ ಮಾಡುವನು. ಕ್ರಮಕ್ಕೆ ವಿರುದ್ಧಪದ ಅಕ್ರಮ. ದೇವರ ವ್ಯವಸ್ಥೆ ಕ್ರಮಗಳನ್ನು ಮೀರಿ ತುಚ್ಛ ಪಾಪ ಕಾರ್ಯಗಳಲ್ಲಿ ತೊಡಗುವಾಗ ಅದು ಅಕ್ರಮವಾಗಿ ಮಾರ್ಪಡುವದು. ಒಂದು ದಿನ ಕರ್ತನು ಇವುಗಳನ್ನು ನೋಡಿ "ಧರ್ಮವನ್ನು ಮೀರಿ ನಡೆಯುವವರೇ ನನ್ನಿಂದ ತೊಲಗಿಹೋಗಿರಿ" (ಮತ್ತಾ. 7:23) ಎಂದು ಹೇಳುವನು.

ದಾವೀದನು ಕರ್ತನಿಗೆ ಹತ್ತಿರವಾದವನೇ. ಇಸ್ರಾಯೇಲಿನ ಸಂಗೀತಗಳನ್ನು ಇಂಪಾಗಿ ಹಾಡಿದವನು. ಕುರಿ ಕಾಯುತ್ತಿದ್ದಾಗಲೇ ಕರ್ತನು ನನಗೆ ಕುರುಬನು ಎಂಬ ಕೀರ್ತನೆಯನ್ನು ಬರೆದನು. ಆದಾಗ್ಯೂ ಆ ಕುರುಬನಾದ ಕರ್ತನನ್ನು ತನ್ನ ಯೋಚನೆಗಳಿಗೂ, ಭಾವನೆಗಳಿಗೂ ಕುರುಬನಂತೆ ಇಟ್ಟುಕೊಳ್ಳಲಿಲ್ಲ. ಅವನ ಅರಮನೆಯ ಕೆಳಗೆ ಬತ್ಷೇಬಳೆಂಬ ಹೆಣ್ಣು ಸ್ನಾನ ಮಾಡುತ್ತಿರುವದನ್ನು ಕಂಡು ಅವನಿಗೆ ಅರಿವಿಲ್ಲದೆಯೇ ಇಚ್ಛೆಯ ಯೋಚನೆಗಳಿಗೆ ಬಲಿಯಾಗಿ ಪಾಪಕೃತ್ಯವನ್ನು ಎಸಗಿದನು. ಅವಳ ಗಂಡನನ್ನು ತಂತ್ರವಾಗಿ ಕೊಲ್ಲಿಸಿದನು. "ಹೇಗೆಂದರೆ, ಮನಸ್ಸಿನೊಳಗಿಂದ ಕೆಟ್ಟ ಆಲೊಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳು ಸಾಕ್ಷಿ ಬೈಗಳು ಹೊರಟುಬರುತ್ತವೆ. ಮನುಷ್ಯನನ್ನು ಕೆಡಿಸುವಂಥವುಗಳು ಇವೇ" (ಮತ್ತಾ. 15:19–20) ಎಂದು ಸತ್ಯವೇದ ಹೇಳುತ್ತದೆ. ಪ್ರವಾದಿಯಾದ ನಾತಾನನು, ದಾವೀದನ ಅಕ್ರಮವನ್ನು ಅವನಿಗೆ ತಿಳಿಯಪಡಿಸಿದಾಗ, ದಾವೀದನು "ಯೆಹೋವನೇ, ನನ್ನ ಪಾಪವು ಬಹು ಘೋರವಾಗಿದೆ, ಆದರೂ ನಿನ್ನ ಹೆಸರಿನ ನಿಮಿತ್ತ ಅದನ್ನು ಕ್ಷಮಿಸು" (ಕೀರ್ತ. 25:11) ಎಂದು ಕಣ್ಣೀರಿಟ್ಟು ಬೇಡಿದನು. ತನ್ನ ಅಕ್ರಮದಿಂದ ಬಂದ ತಪ್ಪಿತಸ್ಥ ಮನಸ್ಸಾಕ್ಷಿಯಿಂದ ಬಿಡುಗಡೆ ಹೊಂದಲು, ಕರ್ತನ ಮುಂದೆ ತನ್ನನ್ನು ತಗ್ಗಿಸಿಕೊಂಡು ಪಾಪವನ್ನು ಅರಿಕೆ ಮಾಡಿದನು. "ನನ್ನ ಜೀವಮಾನವೆಲ್ಲಾ ದುಃಖದಲ್ಲಿಯೂ ನಿಟ್ಟುಸಿರಿನಲ್ಲಿಯೂ ಕಳೆದುಹೋಗುತ್ತಾ ಇದೆ. ನನ್ನ ಅಪರಾಧದಿಂದ ನನ್ನ ಶಕ್ತಿಯು ಕುಂದಿಹೋಯಿತು. ನನ್ನ ಎಲುಬುಗಳು ಸವೆದುಹೋಗಿವೆ" (ಕೀರ್ತ. 31:10) ಎಂದು ಹೇಳುತ್ತಾನೆ.

ದೇವಮಕ್ಕಳೇ, ಹತ್ತು ಅಡಿ ಎತ್ತರದಿಂದ ಬಿದ್ದರೆ, ಸ್ವಲ್ಪ ಪೆಟ್ಟಾಗುತ್ತದೆ, ಇಪ್ಪತ್ತು ಅಡಿ, ಮೂವತ್ತು ಅಡಿ ಹತ್ತಿ ಅಲ್ಲಿಂದ ಬಿದ್ದರೆ, ಎಲುಬು ಮುರಿದು ತಿಂಗಳಾನುಗಟ್ಟಲೆ ನರಳಬೇಕಾಗುತ್ತದೆ. ಅದರಂತೆ, ಆತ್ಮೀಕ ಜೀವಿತದಲ್ಲಿ ಉನ್ನತ ಸ್ಥಿತಿಗೆ ಏರಿ ಬೀಳುವಾಗ ಶಾಪಗಳಿಂದ ಕಷ್ಟ ಅನುಭವಿಸಬೇಕಾಗುವದು. ಆದ್ದರಿಂದ ಅಕ್ರಮ ಆಲೋಚನೆಗಳಿಗೆ ಮನಸ್ಸಿನಲ್ಲಿ ಸ್ಥಳ ಕೊಡದಿರಿ.

*ನೆನಪಿಗೆ : ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು; ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನನ್ನ ದೋಷಕ್ಕೆ ವಿಮುಖನಾಗು, ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು (ಕೀರ್ತ: 51:2,9).*

ಫೆಬ್ರವರಿ **26**

## ಮನಸ್ಸಿನ ಚಿಂತೆ!

ಬೆಳಿಗ್ಗೆ : ಅರಣ್ಯ 12,13,14
ಸಂಜೆ : ಮಾರ್ಕ. 5:21–43

"ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (1 ಪೇತ್ರ. 5:7).

ಪ್ರಪಂಚದಲ್ಲಿ ಬಹುಪಾಲು ಜನರನ್ನು ಚಿಂತೆ ಎಂಬುದು ಆಕ್ರಮಿಸಿ ಮನಸ್ಸಿನ ನೆಮ್ಮದಿಯನ್ನು ಹಾಳು ಮಾಡುತ್ತಿರುವದು. ಎಂಥವರನ್ನೂ ಚಿಂತೆ ಎಂಬುದು ಕಾಡದೆ ಇರದು.

ಒಬ್ಬ ಮಿಶನರಿ ಒಮ್ಮೆ ತನ್ನ ಕೆಲಸವನ್ನು ಮುಗಿಸಿ ಮನೆಗೆ ಜೀಪಿನಲ್ಲಿ ಹಿಂತಿರುಗುತ್ತಿದ್ದರು. ಮಾರ್ಗಮಧ್ಯದಲ್ಲಿ ಒಬ್ಬ ಹೆಣ್ಣುಮಗಳು ಸೌದೆ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಬರುತ್ತಿದ್ದಳು. ಅವಳನ್ನು ನೋಡಿದ ಮಿಶನರಿ ಜೀಪನ್ನು ನಿಲ್ಲಿಸಿ ವಾಹನದಲ್ಲಿ ಕುಳಿತುಕೊಳ್ಳುವಂತೆ ಹೇಳಲು ಅವಳು ಸೌದೆ ಹೊರೆಯೊಂದಿಗೆ ಜೀಪು ಹತ್ತಿ ಕುಳಿತುಕೊಂಡಳು. ಸ್ವಲ್ಪದೂರ ಪ್ರಯಾಣಿಸಿದ ಮಿಶನರಿ ಹಿಂತಿರುಗಿ ನೋಡಲು, ಆ ಹೆಣ್ಣುಮಗಳು ಸೌದೆ ಹೊರೆಯನ್ನು ತನ್ನ ತಲೆಯ ಮೇಲೆಯೇ ಹೊತ್ತುಕೊಂಡು ಕುಳಿತಿರುವದನ್ನು ಕಂಡರು. ಆಗ ಆ ಹೆಂಗಸು, "ಅಯ್ಯಾ, ನನ್ನನ್ನು ಜೀಪಿನಲ್ಲಿ ಹತ್ತಿಸಿಕೊಂಡಿರಿ. ಈ ಸೌದೆ ನಿಮಗೆ ಭಾರವಾಗಿರಬಾರದು ಅಲ್ಲವೇ?" ಅಂದಳು. ಕರ್ತನು ಶಿಲುಬೆಯಲ್ಲಿ ನಮ್ಮ ಪಾಪಗಳನ್ನು ಹೊತ್ತನು (ಯೆಶಾ. 53:12). ಅಪರಾಧಗಳನ್ನು ಹೊತ್ತನು (ಯೆಶಾ. 53:11). ನಮ್ಮ ಸಂಕಟಗಳನ್ನು ಹೊತ್ತನು (ಯೆಶಾ. 53:4). ನಮ್ಮ ಬಲಹೀನತೆಗಳನ್ನು, ವ್ಯಾಧಿಗಳನ್ನು ಹೊತ್ತನು (ಮತ್ತಾ. 8:17). ಶಾಪಗಳನ್ನು ಹೊತ್ತನು (ಗಲಾ. 3:14). ಇಂದು ನಿಮ್ಮ ಭಾರ ಯಾವದಾಗಿದ್ದರೂ ಅವೆಲ್ಲವುಗಳನ್ನು ಹೊರಲು ಕಾತುರವುಳ್ಳವನಾಗಿ "ಎಲೈ ಕಷ್ಟಪಡುವವರೇ ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾ. 11:28) ಎಂದು ಕರೆಯುವನು. ಆದರೆ ಜನರೋ, ಕರ್ತನನ್ನು ನಂಬಿ ಆತನನ್ನು ಆಶ್ರಯಿಸಿ ತಮ್ಮ ಭಾರವನ್ನು ಆತನ ಮೇಲೆ ಹಾಕದೆ, ಗಂಡನ ಬಗ್ಗೆ ಚಿಂತೆ, ಮಕ್ಕಳ ಬಗ್ಗೆ ಚಿಂತೆ, ಭವಿಷ್ಯತ್ಕಾಲದ ಚಿಂತೆ ಎಂದು ಎಲ್ಲಾ ಚಿಂತೆಗಳನ್ನು ಸುಮ್ಮನೆ ಹೊತ್ತುಕೊಂಡು ಬಾಧೆಪಡುವರು.

ದೇವಮಕ್ಕಳೇ, ನೀವು ಚಿಂತಿಸುವಾಗ ನಿಮ್ಮನ್ನು ಸಾಕಿ ಸಲಹುತ್ತಿರುವ ಪರಮತಂದೆ ದುಃಖಿಸುವನಲ್ಲವೇ! ಅಲ್ಪವಿಶ್ವಾಸಿಯೇ, ಯಾಕೆ ಚಿಂತೆ ಮಾಡುತ್ತೀ? ಎಂದು ಕೇಳುವದಿಲ್ಲವೇ? ಚಿಂತೆ ನಿಮ್ಮ ಸಂತೋಷವನ್ನು ತಡೆಯುವದು. ಮನಸ್ಸನ್ನು ಬಲಹೀನಗೊಳಿಸುವದು. ಕರ್ತನ ಮೇಲೆ ಭಾರಹಾಕುವದಾದರೆ ಇನ್ನು ನೀವು ಚಿಂತೆ ಮಾಡುವ ಅಗತ್ಯವಿಲ್ಲ.

*ನೆನಪಿಗೆ : "ಚಿಂತೆ ಮಾಡಿ ಮಾಡಿ ಒಂದು ಮೊಳ ಉದ್ದ ಬೆಳೆಯಲು ಯಾರಿಂದಾದೀತು?" (ಮತ್ತಾ. 6:27).*



ಫೆಬ್ರವರಿ **27**

## ನಾಳೆಯ ಚಿಂತೆ!

ಬೆಳಿಗ್ಗೆ : ಅರಣ್ಯ 15, 16
ಸಂಜೆ : ಮಾರ್ಕ. 6:1–29

"ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ. ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವದು. ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು" (ಮತ್ತಾ. 6:34).

ನೀವು ಭವಿಷ್ಯತ್ತಿನ ಕುರಿತೋ, ನಾಳೆ ದಿನದ ಕುರಿತೋ ಚಿಂತೆ ಮಾಡುವದನ್ನು ಕರ್ತನು ಇಷ್ಟ ಪಡುವದಿಲ್ಲ. ಪರ್ವತ ಪ್ರಸಂಗದಲ್ಲಿ ಕ್ರಿಸ್ತನು ಪುನಃ ಪುನಃ "ನೀವು ವಿಶೇಷವಾದವರು, ಆದ್ದರಿಂದ ಚಿಂತೆ ಮಾಡಬೇಡಿರಿ. ಆಕಾಶದ ಪಕ್ಷಿಗಳಿಗಿಂತ ವಿಶೇಷವಾದವರು. ಅರಣ್ಯ ಪುಷ್ಪಗಳಿಗಿಂತ ನೀವು ವಿಶೇಷವಾದವರು. ಅವುಗಳನ್ನು ಪೋಷಿಸುವ ದೇವರು ನಿಮ್ಮನ್ನೂ ಪೋಷಿಸುವನು. ಉಡಿಸಿ ತೊಡಿಸುವನು" ಎಂದು ಹೇಳುತ್ತಾನೆ. ಕಳವಳವು ಮನಸ್ಸನ್ನು ಕುಗ್ಗಿಸುವದು, ಕನಿಕರದ ಮಾತು ಅದನ್ನು ಹಿಗ್ಗಿಸುವದು" (ಜ್ಞಾನೋ. 12:25).

ಒಬ್ಬ ವಿಶ್ವಾಸಿ ಒಂದು ದೊಡ್ಡ ಹುದ್ದೆಯಲ್ಲಿದ್ದರು. ಆತನು ಕ್ರೈಸ್ತನಾದ್ದರಿಂದ ಆತನ ಮೇಲಧಿಕಾರಿ ಆತನನ್ನು ಸಹಿಸುತ್ತಿರಲಿಲ್ಲ. ಒಂದು ದಿನ ಇಲ್ಲಸಲ್ಲದ ಆರೋಪಗಳನ್ನು ಆ ಅಧಿಕಾರಿಯ ಮೇಲೆ ಹೊರಿಸಿ, ಕೆಳದರ್ಜೆಗೆ ಇಳಿಸಿ, ದೂರದ ಊರಿಗೆ ವರ್ಗಾಯಿಸಲು ಆರ್ಡರ್ ಟೈಪ್‌ಮಾಡಲು ಹೇಳಿದನು. ಈ ವಿಶ್ವಾಸಿ ಅಂದು ಮನೆಗೆ ಬಂದು ಹೆಂಡತಿ ಮಕ್ಕಳೊಂದಿಗೆ ಕೂಡಿ ಕರ್ತನನ್ನು ಸ್ತುತಿಸಿ ಪ್ರಾರ್ಥಿಸಿ ಚೆನ್ನಾಗಿ ನಿದ್ರೆ ಹೋದರು. ಬೆಳಿಗ್ಗೆ ಅವರು ಕೇಳಿದ ಮೊದಲ ಸುದ್ದಿ, ಇದ್ದಕ್ಕಿದ್ದಂತೆ ಆತನ ಮೇಲಧಿಕಾರಿ ಹೃದಯಾಘಾತದಿಂದ ಮರಣ ಹೊಂದಿದರು ಎಂಬುದೇ. ದೇವರು ಈ ದೇವಮನುಷ್ಯನಿಗಾಗಿ ಹೋರಾಡಿ ಯುದ್ಧ ಮಾಡಿದನೆಂದು ಆ ಕಛೇರಿಯಲ್ಲಿದ್ದವರೆಲ್ಲರೂ ಅರಿತುಕೊಂಡರು. ಗತಿಸಿಹೋದ ಆ ಮೇಲಧಿಕಾರಿಗೆ ಬದಲಾಗಿ ಬಂದ ಹೊಸ ಅಧಿಕಾರಿ ಹಳೆಯ ಆರ್ಡರನ್ನು ರದ್ದುಪಡಿಸಿ, ಇವರನ್ನು ಪ್ರೀತಿಯಿಂದಲೂ, ಗೌರವದಿಂದಲೂ ನಡೆಸಿಕೊಂಡರು.

ದೇವಮಕ್ಕಳೇ, ಕ್ರಿಸ್ತನ ಮೇಲೆ ನಿಮ್ಮ ನಂಬಿಕೆ ಇರುವದಾದರೆ, ಸೋಲಿನ ಚಿಂತೆ ಮಾಡದಿರಿ. ಕ್ರಿಸ್ತನನ್ನೇ ಪೂರ್ಣವಾಗಿ ಆಶ್ರಯಿಸಿ. ಆತನು ಭೂಮ್ಯಾಕಾಶಗಳಲ್ಲಿ ಸಕಲ ಅಧಿಕಾರವನ್ನು ಹೊಂದಿರುವನು. ನಿಮ್ಮ ಜೀವಿತದಲ್ಲಿ ಕಳವಳ ಚಿಂತೆ ಭಯ ಉಂಟಾಗುವಾಗ ಕೀರ್ತ. 138:8ನ್ನು ಜ್ಞಾಪಕ ಮಾಡಿಕೊಳ್ಳಿರಿ. "ಯೆಹೋವನು ನನ್ನ ಕಾರ್ಯವನ್ನು ಸಿದ್ಧಿಗೆ ತರುವನು. ಆತನು ತನಗಾಗಿ ಎಲ್ಲವನ್ನೂ ಮಾಡಿ ಮುಗಿಸುವನು ಎಂದು ದಾವೀದನು ಹೇಳುತ್ತಾನೆ.

*ನೆನಪಿಗೆ : "ಚೀಯೋನಿನಲ್ಲಿರುವ ಯೆಹೋವನು ನಿನ್ನನ್ನು ಆಶೀರ್ವದಿಸಲಿ. ಜೀವಮಾನವೆಲ್ಲಾ ಯೆರೂಸಲೇಮಿನ ಸೌಭಾಗ್ಯವನ್ನು ನೋಡುವವನಾಗು" (ಕೀರ್ತ. 128:5).*